# ಶ್ರೀ ಸುಬ್ರಹ್ಮಣ್ಯ ವ್ರತ

## ಸಾಕ್ಷಾತ್ ಶ್ರೀ ಸ್ವಾಮಿಯಿಂದ ಅನುಗ್ರಹಿಸಲ್ಪಟ್ಟ ಅದ್ಭುತ ವ್ರತ



ತಿಮ್ಮರಾಜು ವಿಶ್ವಪತಿ ರಾಮಕೃಷ್ಣಮೂರ್ತಿ



ಓಂ ತತ್ಪುರುಷಾಯ ವಿದ್ಮಹೇ |

ಮಹಾಸೇನಾಯ ಧೀಮಹಿ |

ತನ್ನೋ ಸ್ಕಂದಃ ಪ್ರಚೋದಯಾತ್ ||

**ಶ್ರೀರಸ್ತು ಶುಭಮಸ್ತು ಅವಿಘ್ನಮಸ್ತು**

# ಶ್ರೀ ಸುಬ್ರಹ್ಮಣ್ಯ ವ್ರತ

## ಸಾಕ್ಷಾತ್ ಶ್ರೀ ಸ್ವಾಮಿಯಿಂದ ಅನುಗ್ರಹಿಸಲ್ಪಟ್ಟ ಅದ್ಬುತ ವ್ರತ



**ತಿಮ್ಮರಾಜು ವಿಶ್ವಪತಿ ರಾಮಕೃಷ್ಣಮೂರ್ತಿ**

**SHRI DESIGNS**

**VEDIC LOGO DESIGNERS**

**www.lordofsevenhills.com**

**Cell : + 91 9849443752**

**Hyderabad**

**2021**

# ಶ್ರೀ ಸುಬ್ರಹ್ಮಣ್ಯ ವ್ರತ

## ಸಾಕ್ಷಾತ್ ಶ್ರೀ ಸ್ವಾಮಿಯಿಂದ ಅನುಗ್ರಹಿಸಲ್ಪಟ್ಟ ಅದ್ಭುತ ವ್ರತ

**ತಿಮ್ಮರಾಜು ವಿಶ್ವಪತಿ ರಾಮಕೃಷ್ಣಮೂರ್ತಿ**

© **ಸರ್ವಹಕ್ಕುಗಳು ರಚಯಿತನದು**

**ತಿಮ್ಮರಾಜು ವಿಶ್ವಪತಿ ರಾಮಕೃಷ್ಣಮೂರ್ತಿಯವರು ರಚಿಸಿದ ಆಧ್ಯಾತ್ಮಿಕ ಪುಸ್ತಕಗಳನ್ನು ಈ ವೆಬ್ಸೈಟಿನಿಂದ ಉಚಿತವಾಗಿ ಪ್ರಿಂಟ್ ಮಾಡಿಕೊಳ್ಳಬಹುದು**

**www.lordofsevenhills.com**

**T.V.R.K. MURTHY, M.Tech**

**Flat No.903, F-Block, Vertex Sadguru Krupa Apartments**

**Beside Sanghamitra School, Nizampet Road,**

**HYDERABAD – 500 085, India**

**Cell : + 91 9849443752**

**Email : viswapathi@yahoo.com, shridesigns@gmail.com**

# ಮುನ್ನುಡಿ

**ಸುಬ್ರಹ್ಮಣ್ಯಂ ಸುಬ್ರಹ್ಮಣ್ಯಂ ಷಣ್ಮುಖಾನಾಥಂ ಸುಬ್ರಹ್ಮಣ್ಯಂ |**
**ಸುಬ್ರಹ್ಮಣ್ಯಂ ಸುಬ್ರಹ್ಮಣ್ಯಂ ಶಂಕರಪುತ್ರಂ ಸುಬ್ರಹ್ಮಣ್ಯಂ ||**

ಶ್ರೀ ಸುಬ್ರಹ್ಮಣ್ಯೇಶ್ವರ ದೇವರು ಜ್ಞಾನ ಪ್ರದಾತ. ತನ್ನನು ನಂಬಿ ಪ್ರಾರ್ಥಿಸುವವರನ್ನು ಈ ದೇವರು ನಿತ್ಯ ಕಣ್ಣಿನ ರೆಪ್ಪೆಯ ಹಾಗೆ ಕಾಪಾಡುತ್ತಾನೆ. ಆ ದೇವರ ನಿತ್ಯ ಸನ್ನಿಧಾನವಿರುವ ದಿವ್ಯಕ್ಷೇತ್ರಗಳಲ್ಲಿ ತಮಿಳುನಾಡಿನಲ್ಲಿ ಆರು ಕ್ಷೇತ್ರಗಳು ಬಹಳ ಮಹಾಮಹಿಮೆಯುಳ್ಳದ್ದು. ಅದೇ ಪಳನಿ, ತಿರುತ್ತಣಿ, ತಿರುಚಂದೂರು, ಪಲಮುಡಿರ್ ಚೋಲೈ, ತಿರುಪ್ಪಾರಕುಂಡ್ರಮ್ ಮತ್ತು ಸ್ವಾಮಿ ಮಲೈ. ಈ ಆರು ಕ್ಷೇತ್ರಗಳಲ್ಲಿ ಕಾರ್ತಿಕೇಯನನ್ನು ದರ್ಶಿಸಿದವರಿಗೆ, ಎಷ್ಟೋ ಜನ್ಮಗಳ ಪಾಪಗಳು ನಶಿಸಿಹೋಗುತ್ತದೆ. ಸರ್ವ ಸೌಭಾಗ್ಯಗಳು ಲಭಿಸುತ್ತದೆ.

ಆ ಶ್ರೀ ಶ್ರೀನಿವಾಸನ ದಯದಿಂದ, ನಾನು ಇಲ್ಲಿಯವರೆಗೆ ಆ ದೇವರ ಲೀಲೆಗಳ ಮೇಲೆ ಹದಿನಾರು ಪುಸ್ತಕಗಳನ್ನು ರಚಿಸುವುದು ಸಾಧ್ಯವಾಯಿತು. ಅವೆಲ್ಲಾ ಭಕ್ತರನ್ನು ಆನಂದಪಡಿಸುತ್ತಿವೆ. ಅದೆಲ್ಲಾ ಆ ದೇವರ ಅನುಗ್ರಹವಲ್ಲದೇ ಬೇರೇನೂ ಅಲ್ಲ. ಇದರಲ್ಲಿ ಶ್ರೀ ವೆಂಕಟೇಶ್ವರ ವ್ರತಕಲ್ಪ, ಶ್ರೀ ಲಕ್ಷ್ಮೀನರಸಿಂಹ ವ್ರತಕಲ್ಪ, ಶ್ರೀ ಆನಂದ ಆಂಜನೇಯ ... ಭಕ್ತರಿಗೆ ಬಹಳ ಸಂತೋಷತರುತ್ತಿದೆ. ಈ ಮೂರು ವ್ರತವನ್ನು ನಿತ್ಯ ಬಹಳಷ್ಟು ಭಕ್ತರ ಮನೆಗಳಲ್ಲಿ, ಎಷ್ಟೋ ದೇವಾಲಯಗಳಲ್ಲಿ ಆಚರಿಸಲ್ಪಡುತ್ತಿದೆ. ಇದಕ್ಕೆ ಮಿಗಿಲಾದ ಭಾಗ್ಯವೇನಿದೆ?

ಶ್ರೀ ಸುಬ್ರಹ್ಮಣ್ಯೇಶ್ವರನು ಭಕ್ತಸುಲಭನು. ಆ ದೇವರನ್ನು ನಂಬಿ ಪೂಜಿಸುವವರಿಗೆ ಯಾವುದೇ ಆಪತ್ತು ಬಾರದು. ಆಂಧ್ರಪ್ರದೇಶದಲ್ಲಿ, ತಮಿಳುನಾಡಿನಲ್ಲಿ, ಬಹಳಷ್ಟು ಭಕ್ತರಿಗೆ ಈ ದೇವರೇ... ಕುಲದೇವರು. ಈ ಪುಸ್ತಕವನ್ನು ಬರೆಯುವುದು, ಪೂರ್ತಿಯಾಗಿ ಆ ದೇವರ ಅನುಗ್ರಹವಲ್ಲದೇ ಬೇರೇನೂ ಅಲ್ಲ. ಈ ಪುಸ್ತಕವನ್ನು ಬರೆಯುತ್ತಿರುವಷ್ಟು ಹೊತ್ತೂ, ಆ ದೇವರು ಬಾಲಸುಬ್ರಹ್ಮಣ್ಯನ ರೂಪದಲ್ಲಿ, ನನ್ನ ಎದುರಲ್ಲಿ ಕುಳಿತುಕೊಳ್ಳುತ್ತಿದ್ದ. ನಾನು ಬರೆಯುವ ಕಾಗದದತ್ತಾ ಕಿರುನಗೆಯಿಂದ ನೋಡುತ್ತಿದ್ದ. ನನ್ನ ಮೇಜಿನ ಮೇಲೆ ಕೈಗಳನ್ನು ಇಟ್ಟು, ತಲೆಬಗ್ಗಿಸಿ ಏನು ಬರೆಯುತ್ತಿದ್ದೇನೆಂದು ಮುಂದಕ್ಕೆ ಬಾಗಿ ಕಿರುನಗೆಯಿಂದ ನೋಡುತ್ತಿದ್ದ. ಆ ಬಾಲಸುಬ್ರಹ್ಮಣ್ಯನ ದಿವ್ಯರೂಪವನ್ನು ನೆನೆಸಿಕೊಂಡರೇ, ಈಗಲೂ ನನ್ನ ಶರೀರದ ರೋಮಗಳು ಎದ್ದು ನಿಲ್ಲುತ್ತವೆ. ಆ ದಿವ್ಯ ತೇಜಸ್ಸಿನ ಬಗ್ಗೆ ಮಾತಿನಲ್ಲಿ ಹೇಳಲಾಗುವುದಿಲ್ಲ. ಬಹಳ ಮುದ್ದಾಗಿರುವ ಆ ಅದ್ಭುತ ರೂಪವನ್ನು ಅಕ್ಷರದಲ್ಲಿ ವರ್ಣಿಸಲಾಗುವುದಿಲ್ಲ.

ಈ ಶ್ರೀ ಸುಬ್ರಹ್ಮಣ್ಯ ವ್ರತವನ್ನು ಸಂಪೂರ್ಣವಾಗಿ ಆ ದೇವರ ಅನುಗ್ರಹದಿಂದಲೇ ರಚಿಸಿದ್ದು. ಇದನ್ನು ಆಚರಿಸುವುದು ಬಹಳ ಸುಲಭ. ಈ ವ್ರತವನ್ನು ಆಚರಿಸಿದವರಿಗೆ, ಆ ಕಾರ್ತಿಕೇಯನ ಅನುಗ್ರಹವು ಖಂಡಿತಾ ಸಿಗುತ್ತದೆ. ಇದರಲ್ಲಿ ಯಾವ ಸಂಶಯವೂ ಇಲ್ಲ. ಯಾವುದಾದರೂ ಬಾಧೆಗಳಿಂದ ಕಷ್ಟಪಡುತ್ತಿರುವರು, ಈ ವ್ರತವನ್ನು ಆಚರಿಸಿದ ಕೂಡಲೇ ಆ ಬಾಧೆಗಳಿಂದ ಮುಕ್ತರಾಗುತ್ತಾರೆ. ಸಂಪೂರ್ಣ ಆರೋಗ್ಯವು ಲಭಿಸುತ್ತದೆ. ಸಂತಾನವನ್ನು ಬಯಸುವವರಿಗೆ, ಈ ವ್ರತಕ್ಕೆ ಮಿಗಿಲಾದ ಉಪಾಯ ಬೇರೊಂದಿಲ್ಲ. ಆರ್ಥಿಕ ಸಮಸ್ಯೆಗಳಿಂದ ಸಂಕಷ್ಟಕ್ಕೊಳಗಾದವರೂ, ಈ ವ್ರತವನ್ನು ಆಚರಿಸಿದ ಕೂಡಲೇ ಆ ಸಮಸ್ಯೆಗಳಿಂದ ಹೊರಬೀಳುತ್ತಾರೆ.

ಈ ಶ್ರೀ ಸುಬ್ರಹ್ಮಣ್ಯ ವ್ರತವನ್ನು ಆ ದೇವರ ಅನುಗ್ರಹದಿಂದಲೇ ರಚಿಸುವುದು ಸಾಧ್ಯವಾಯಿತು. ಲೇಖನಿಯನ್ನು ಹಿಡಿದದ್ದು ನಾನಾದರೂ, ಪ್ರತಿ ಅಕ್ಷರವು ಮೂಡಿದ್ದು ಆ ದೇವರ ಅನುಗ್ರಹದಿಂದಲೇ ಎಂದು ಭಾವಿಸುತ್ತೇನೆ. ಈ ವ್ರತವನ್ನು ಆಚರಿಸುವುದು ಬಹಳ ಸುಲಭ. ಆಚರಿಸಿದ ಪ್ರತಿ ಒಬ್ಬರಿಗೂ ಆ ಶ್ರೀವಲ್ಲೀ ದೇವಸೇನಾ ಸಮೇತ ಶ್ರೀ ಸುಬ್ರಹ್ಮಣ್ಯೇಶ್ವರ ದೇವರ ಅನುಗ್ರಹವು ಸಿಗಬೇಕೆಂದು ಆ ದೇವರನ್ನು ಮನಸಾರೆ ಬೇಡಿಕೊಳ್ಳುತ್ತಿದ್ದೇನೆ.

ಈ ವ್ರತಕಲ್ಪದ ರಚನೆಯಲ್ಲಿ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಸಹಕರಿಸಿರುವ ಸರ್ವರಿಗೂ, ವ್ರತವನ್ನು ಆಚರಿಸಿರುವ ತಮಗೂ, ವ್ರತಕಥೆಯನ್ನು ಹೇಳಿದರಿಗೂ, ಕೇಳಿದವರಿಗೂ, ಪ್ರಸಾದವನ್ನು ಸ್ವೀಕರಿಸಿದವರಿಗೂ ಆ ಶ್ರೀವಲ್ಲೀ ದೇವಸೇನಾ ಸಮೇತ ಶ್ರೀ ಸುಬ್ರಹ್ಮಣ್ಯೇಶ್ವರ ದೇವರು ಸಕಲ ಸೌಭಾಗ್ಯ, ಆಯುರಾರೋಗ್ಯಗಳನ್ನೂ ಅನುಗ್ರಹಿಸುವನೆಂದು ನಂಬಿರುತ್ತೇನೆ ಮತ್ತು ಆತನಲ್ಲಿ ಪ್ರಾರ್ಥಿಸುತ್ತೇನೆ.

|| ಸರ್ವೇ ಜನಾಃ ಸುಖಿನೋ ಭವಂತು | ಸಮಸ್ತ ಸನ್ಮಂಗಳಾನಿ ಭವಂತು||
|| ಶ್ರೀವಲ್ಲೀ ದೇವಸೇನಾ ಸಮೇತ ಶ್ರೀ ಸುಬ್ರಹ್ಮಣ್ಯೇಶ್ವರ ಕಟಾಕ್ಷ ಸಿದ್ಧಿರಸ್ತು||
|| ಓಂ ತತ್ಸತ್ ||

ಹೈದರಾಬಾದ್ **ತಿಮ್ಮರಾಜು ವಿಶ್ವಪತಿ ರಾಮಕೃಷ್ಣಮೂರ್ತಿ**
ದಿನಾಂಕ: 16-1-2021

************

# ಈ ವ್ರತವನ್ನು ಹೇಗೆ ಆಚರಿಸಬೇಕು?

- ಈ ವ್ರತವನ್ನು ಯಾರಾದರೂ, ಯಾವಾಗಲಾದರೂ, ವಯಸ್ಸಿನಿಂದಾಗಲೀ, ಕುಲದಿಂದಾಗಲೀ, ಭೇದಭಾವವಿಲ್ಲದೇ ಓದಬಹುದು. ಸ್ತ್ರೀ - ಪುರುಷ ಬೇಧವಿಲ್ಲ. ಯಾವ ಮಾಸದಲ್ಲಾಗಲೀ, ಯಾವ ದಿನಗಳಲ್ಲಾಗಲೀ ಓದಬಹುದು. ಷಷ್ಠಿ, ಏಕಾದಶಿ, ಹುಣ್ಣಿಮೆ ತಿಥಿಗಳಲ್ಲಾಗಲೀ ಅಥವಾ ಕೃತಿಕಾ ನಕ್ಷತ್ರ ಇದ್ದ ದಿನ ಪಠಣಮಾಡಿದರೆ ಅತ್ಯಂತ ಶುಭಪ್ರದ. ಮಂಗಳವಾರದ ದಿನ ಓದಿದರೆ ತುಂಬಾ ಉತ್ತಮ. ಅನಂತ ಪುಣ್ಯಫಲ ಸಿಗುತ್ತದೆ. ಯಾವ ರೀತಿಯ ಆಪತ್ತುಗಳೂ ಬಾರದು. ಅಪಮೃತ್ಯು ಭಯ ಇರುವುದಿಲ್ಲ. ಓದಲು ಶಕ್ತಿ ಇಲ್ಲದವರಿಗೆ, ಅವರ ಬಂಧುಗಳು ಯಾರಾದರೂ ಓದಿ, ಕೇಳಿದರೂ ಬಹಳ ಫಲ ಸಿಗುತ್ತದೆ. ಈ ವ್ರತವನ್ನು ಆಚರಿಸುವ ದಿನ ಖಂಡಿತಾ ಉಪವಾಸ ಇರಬೇಕೆಂಬ ನಿಯಮ ಇರುವುದಿಲ್ಲ.

- ಶ್ರೀ ಸುಬ್ರಹ್ಮಣ್ಯ ವ್ರತವನ್ನು ಆಚರಿಸುವುದು ತುಂಬಾ ಸುಲಭ. ಈ ವ್ರತವನ್ನು ಸ್ವಗೃಹದಲ್ಲಾಗಲೀ, ವಸತಿಗೃಹದಲ್ಲಾಗಲೀ, ಯಾವುದೇ ದೇವಾಲಯಗಳಲ್ಲಾಗಲೀ, ನದೀತೀರಗಳಲ್ಲಾಗಲೀ, ಪುಣ್ಯಕ್ಷೇತ್ರಗಳಲ್ಲಾಗಲೀ ಆಚರಿಸಬಹುದು. ಈ ವ್ರತವನ್ನು ಆಚರಿಸುವ ಮೊದಲು ಒಂದು ಬಾರಿ ಮನಸಲ್ಲೇ ಶ್ರೀ ವಿನಾಯಕನಿಗೆ, ನವಗ್ರಹದೇವತೆಗಳಿಗೆ, ಅಷ್ಟದಿಕ್ಪಾಲಕರಿಗೆ ನಮಸ್ಕರಿಸಬೇಕು. ಆನಂತರ  ನಿಮ್ಮ ಹೆಸರು, ನಿಮ್ಮ ಕುಟುಂಬದ ಸದಸ್ಯರ ಹೆಸರುಗಳು, ಗೋತ್ರವನ್ನು ಮನಸ್ಸಲ್ಲೇ ಸ್ಮರಿಸಿ ವ್ರತವನ್ನು ಪ್ರಾರಂಭಿಸಬೇಕು. ಅಷ್ಟೋತ್ತರ ನಾಮ ಪಠಿಸಬೇಕು. ಶ್ರೀ ದೇವರ ಅಂಗ ಪೂಜೆಮಾಡಿ ನಂತರ ಈ ಪುಸ್ತಕದಲ್ಲಿರುವ ಆರು ಕಥೆಗಳನ್ನು ಓದಿ ದೇವರಿಗೆ ಯಾವುದಾದರೂ ಹಣ್ಣು ನಿವೇದಿಸಬೇಕು.

- ಪ್ರತಿ ಮಂಗಳವಾರ ಶ್ರೀ ಸುಬ್ರಹ್ಮಣ್ಯೇಶ್ವರ ದೇವರ ದೇವಸ್ಥಾನದಲ್ಲಿ ಅರ್ಚಕರಿಂದ ಈ ಪುಸ್ತಕವನ್ನು ಪಠಿಸಿದರೆ, ಆ ದೇವಸ್ಥಾನಗಳು ಮಹಾ ಮಹಿಮಾನ್ವಿತವಾದ ದಿವ್ಯಕ್ಷೇತ್ರವಾಗಿ ಹೆಸರು ಪಡೆಯುತ್ತದೆ. ಅಲ್ಲಿಗೆ ಬರುವ ಭಕರೆಲ್ಲರಿಗೂ ಷಣ್ಮುಖನ ಅನುಗ್ರಹ ಪಡೆದು, ಸುಖ-ಶಾಂತಿಯಿಂದ ಜೀವಿಸುತ್ತಾರೆ.

- ಈ ವ್ರತವನ್ನು ಆಚರಿಸುವಾಗ ಪತಿ-ಪತ್ನಿ ಇಬ್ಬರು ಖಂಡಿತಾ ಒಟ್ಟಿಗೆ ಇದ್ದು ಆಚರಿಸಬೇಕೆಂಬ ನಿಯಮ ಇಲ್ಲ.  ಪತಿಗೆ ಅನುಕೂಲವಾದಾಗ ಪತಿ, ಪತ್ನಿಗೆ ಅನುಕೂಲವಾದಾಗ ಪತ್ನಿ ಹೀಗೆ ಅವರವರ ಅನುಕೂಲದಂತೆ ಅವರು ಆಚರಿಸಬಹುದು. ಅನುಕೂಲವಾದಾಗ ಇಬ್ಬರು ಸೇರಿ ಆಚರಿಸಬಹುದು.

  - ದುರದೃಷ್ಟದಿಂದ ಪತ್ನಿಯನ್ನು ಕಳೆದುಕೊಂಡ ಪುರುಷರು, ಪತಿಯನ್ನು ಕಳೆದುಕೊಂಡ ಮಹಿಳೆಯರು ಕೂಡ ನಿರಭ್ಯಂತರವಾಗಿ ಈ ವ್ರತವನ್ನು ಆಚರಿಸಬಹುದು. ಈ ವ್ರತವನ್ನು ಆಚರಿಸಿದವರಿಗೆ ಪೂರ್ತಿ ಮನಶಾಂತಿ ಉಂಟಾಗುತ್ತದೆ.

- ಸಂತಾನವನ್ನು ಬಯಸುವವರು ಸರತಿನಲ್ಲಿ ಆರು ಮಂಗಳವಾರ ಈ ವ್ರತವನ್ನು ಆಚರಿಸಿದರೆ ಅತೀ ಶೀಘ್ರದಲ್ಲೇ ಒಳ್ಳೆಯ ಸಂತಾನವನ್ನು ಪಡೆಯುತ್ತಾರೆ. ಹಾಗೇ ಆರ್ಥಿಕ ಸಮಸ್ಯೆಯಿಂದ ಬಳಲುವವರು ಆರು ವಾರ ವ್ರತವನ್ನು ಆಚರಿಸಿದರೆ ಆ ಸಮಸ್ಯೆಗಳೆಲ್ಲಾ ಕೂಡಲೇ ಪರಿಹಾರವಾಗುತ್ತದೆ. ಮಾರ್ಗಶಿರ ಶುದ್ಧಷಷ್ಟಿ ದಿನ ಈ ವ್ರತವನ್ನು ಆಚರಿಸಿದರೆ ಅತ್ಯಂತ ಶುಭಪ್ರದ.

- ವಿವಾಹವಾಗದ ಯುವಕ, ಯುವತಿಯರು ಈ ವ್ರತವನ್ನು ಆಚರಿಸಿದರೆ ಅವರಿಗೆ ಯೋಗ್ಯ ಬಾಳಸಂಗಾತಿ ಸಿಗುತ್ತಾರೆ. ಯಾವುದೇ ಕೆಲಸ ತುಂಬಾ ನಿಧಾನವಾಗಿ ಕಾರ್ಯ ನಿರ್ವಹಿಸುತ್ತಿದ್ದರೆ ಈ ವ್ರತವನ್ನು ಆಚರಿಸಿದರೆ ಅಡೆತಡೆಗಳೆಲ್ಲಾ ತೊಲಗಿ ಆ ಕೆಲಸವು ಬೇಗನೇ ನಿರಾಯಾಸವಾಗಿ ನೆರವೇರುತ್ತದೆ. ಯಾವುದೇ ಗ್ರಹಭಾಧೆಗಳನ್ನು ಅನುಭವಿಸುತ್ತಿದ್ದರೂ, ಈ ವ್ರತವನ್ನು ಆಚರಿಸಿದರೆ ಅವುಗಳಿಂದ ಪೂರ್ತಿ ಉಪಶಮನವನ್ನು ಹೊಂದುತ್ತಾರೆ.

- ಶ್ರೀ ಸುಬ್ರಹ್ಮಣ್ಯೇಶ್ವರನ ಯಾವ ದಿವ್ಯಕ್ಷೇತ್ರದಲ್ಲಾಗಲೀ ಈ ವ್ರತವನ್ನು ಆಚರಿಸಿದರೇ ಕೆಲವು ಕೋಟಿ ಜನ್ಮದ ಪಾಪಗಳು ನಶಿಸುತ್ತದೆ. ವ್ರತವನ್ನು ಆಚರಿಸಿದ ಕೂಡಲೇ ಶರೀರದಲ್ಲಿರುವ ರೋಗಗಳೆಲ್ಲಾ ತೊಲಗುತ್ತದೆ. ಶರೀರಕ್ಕೆ ಹೊಸ ತೇಜಸ್ಸು ಉಂಟಾಗುತ್ತದೆ. ದೀರ್ಘಾಯುಷ್ಯದಿಂದ ಸುಖವಾಗಿ ಜೀವಿಸುತ್ತಾರೆ.

- ದೂರದೇಶದಲ್ಲಿರುವ ನಿಮ್ಮ ಮಕ್ಕಳ ನಿಮಿತ್ತ, ನಿಮ್ಮ ಬಂಧುಗಳ ನಿಮಿತ್ತ ನೀವು ಕೂಡ ಓದಬಹುದು. ಅವರಿಗೆ ಸಂತಾನ, ವಿವಾಹ, ಉದ್ಯೋಗ, ಆರೋಗ್ಯಕ್ಕಾಗಿ ಈ ಪುಸ್ತಕವನ್ನು ಸರತಿಯಲ್ಲಿ ಮೂರು ಮಂಗಳವಾರ ದೇವಸ್ಥಾನದಲ್ಲಾಗಲೀ ಅಥವಾ ನಿಮ್ಮ ಮನೆಯಲ್ಲಾಗಲೀ ಓದಿದರೆ ಕೂಡಲೇ ಫಲಿತವು ಸಿಗುತ್ತದೆ.

- ಯಾವುದಾದರೂ ಶುಭಕಾರ್ಯ ಪ್ರಾರಂಭಿಸುವ ಮೊದಲು, ಈ ವ್ರತವನ್ನು ಆಚರಿಸಿದರೆ ಶ್ರೀ ಸುಬ್ರಹ್ಮಣ್ಯೇಶ್ವರ ದೇವರ ಅನುಗ್ರಹದಿಂದ ಆ ಕೆಲಸಕಾರ್ಯಗಳಲ್ಲಿ ನಿರಾತಂಕವಾಗಿ ನೆರವೇರುತ್ತದೆ. ಮನಸ್ಸಲ್ಲಿ ಅಶಾಂತಿ ಇರುವಾಗ, ಎಣಿಸದೇ ಯಾವುದಾದರೂ ಕಷ್ಟಬಂದಾಗ ತಿಥಿ, ವಾರ, ನಕ್ಷತ್ರಗಳಲ್ಲಿ ದೋಷ ನೋಡದೇ ಈ ವ್ರತವನ್ನು ಆಚರಿಸಬಹುದು. ಆ ಸ್ವಾಮಿಯ ಅನುಗ್ರಹದಿಂದ ಮನಸ್ಸು ಪ್ರಶಾಂತವಾಗಿ ಆ ಕಷ್ಟಗಳೆಲ್ಲಾ ತೊಲಗುತ್ತವೆ.

- ಅನುಕೂಲವಾದರೆ ಈ ವ್ರತವನ್ನು ಪುರೋಹಿತರ ಸಹಾಯದಿಂದ ಆಚರಿಸಿದರೆ ಒಳ್ಳೆಯದು. ಕಲಶ ಸ್ಥಾಪನೆ ಮಾಡಿ ಅಷ್ಟದಿಕ್ಪಾಲಕರನ್ನು, ನವಗ್ರಹದೇವತೆಗಳನ್ನು, ಲೋಕಪಾಲಕರನ್ನು ಮಂಟಪದಲ್ಲಿ ಆಯಾ ದಿಕ್ಕಿನಲ್ಲಿ ಆವಾಹನೆ ಮಾಡಿ ಪೂರ್ತಿ ವಿಧಾನದಿಂದ ಈ ವ್ರತವನ್ನು ಆಚರಿಸಿದರೆ ಶುಭಪ್ರದ.

ಈ ವಿಧವಾಗಿ, ಯಾವ ರೀತಿಯಲ್ಲಾಗಲೀ, ಯಾವ ದಿನದಲ್ಲಾಗಲೀ ಈ ಪುಸ್ತಕವನ್ನು ಓದಿ ಶ್ರೀ ಸುಬ್ರಮಣ್ಯೇಶ್ವರ ದೇವರ ಅನುಗ್ರಹವನ್ನು ಪಡೆದುಕೊಳ್ಳಬಹುದು.

************

# ಶ್ರೀ ಸುಬ್ರಹ್ಮಣ್ಯ ವ್ರತ

## ಅಂಗ ಪೂಜೆ

ಓಂ ಅಮರಸ್ತುಪಾದಯುಗಳಾಯ ನಮಃ | ಪಾದೌ ಪೂಜಯಾಮಿ |
ಓಂ ದ್ವಿಷಡ್ಬಾಹವೇ ನಮಃ | ಬಾಹುನ್ ಪೂಜಯಾಮಿ |
ಓಂ ದ್ವಿಷ ಣ್ಣೇ ತ್ರಾಯ ನಮಃ | ನೇತ್ರೇ ಪೂಜಯಾಮಿ |
ಓಂ ದ್ವಿಷಣ್ಮುಖಾಯ ನಮಃ | ವದನಂ ಪೂಜಯಾಮಿ |
ಓಂ ದ್ವಿಷಟ್-ಕರ್ಣಾಯ ನಮಃ | ಕರ್ಣಾನ್ ಪೂಜಯಾಮಿ |
ಓಂ ದಯಾಹೃದಯಾಯ ನಮಃ | ಹೃದಯಂ ಪೂಜಯಾಮಿ |
ಓಂ ಗೃಹ್ಯಾಯ ನಮಃ | ಗೃಹ್ಯಂ ಪೂಜಯಾಮಿ |
ಓಂ ಸುನಾಶಾಕಾಯ ನಮಃ | ನಾಸಿಕಂ ಪೂಜಯಾಮಿ |
ಓಂ ಫಾಲನೇತ್ರಸುತಾಯ ನಮಃ | ಫಾಲಂ ಪೂಜಯಾಮಿ |
ಓಂ  ಜ್ಞಾನ ಶಕ್ತಿಕರಾಯ ನಮಃ | ಹಸ್ತಾನ್ ಪೂಜಯಾಮಿ |
ಓಂ ಕಟಿಹಸ್ತಪಾಣಯೇ ನಮಃ | ಕಟಿಂ ಪೂಜಯಾಮಿ |
ಓಂ ಲಂಬೋಧಾನುಜಾಯ ನಮಃ | ಉದರಂ ಪೂಜಯಾಮಿ
ಓಂ ಸುವಿಶಾಲ ವಕ್ಷಸೇವ ನಮಃ | ವಕ್ಷಸ್ಥಲಂ ಪೂಜಯಾಮಿ |
ಓಂ ಶಿತಿಕಂಠಸೂತಾಯ ನಮಃ | ಕಂಠಂ ಪೂಜಯಾಮಿ |
ಓಂ ಸರ್ವಸೇವಾಪತಯೇ ನಮಃ | ಸರ್ವಾಣ್ಯಂಗಾನಿ ಪೂಜಯಾಮಿ |
ಶ್ರೀ ಸುಬ್ರಹ್ಮಣ್ಯೇಶ್ವರ ಸ್ವಾಮಿ ಅಥಾಂಗ ಪೂಜಾಂ ಸಮರ್ಪಯಾಮಿ ||

******

## ಶ್ರೀ ಸುಬ್ರಮಣ್ಯ ಅಷ್ಟೋತ್ತರ ಶತನಾಮಾವಳಿ

ಓಂ ಸ್ಕಂದಾಯ ನಮಃ |
ಓಂ ಗುಹಾಯ ನಮಃ |
ಓಂ ಷಣ್ಮುಖಾಯ ನಮಃ |
ಓಂ ಫಾಲನೇತ್ರಸುತಾಯ ನಮಃ |
ಓಂ ಪ್ರಭವೇ ನಮಃ |
ಓಂ ಪಿಂಗಳಾಯ ನಮಃ |
ಓಂ ಕೃತ್ತಿಕಾಸೂನವೇ ನಮಃ |
ಓಂ ಶಿಖಿವಾಹಾನಾಯ ನಮಃ |
ಓಂ ದ್ವಿಷಡ್ಭುಜಾಯ ನಮಃ | (10)
ಓಂ ದ್ವಿಷಣ್ಣೇತ್ರಾಯ ನಮಃ |
ಓಂ ಶಕ್ತಿಧರಾಯ ನಮಃ |
ಓಂ ಪಿಶಿತಾಶ ಪ್ರಭಂಜನಾಯ ನಮಃ |
ಓಂ ತಾರಕಾಸುರ ಸಂಹಾರಿಣೇ ನಮಃ |
ಓಂ ರಕ್ಷೋಬಲವಿಮರ್ಥನಾಯ ನಮಃ |
ಓಂ ಮತ್ತಾಯ ನಮಃ |
ಓಂ ಪ್ರಮತ್ತಾಯ ನಮಃ |

ಓಂ ಉನ್ಮತ್ತಾಯ ನಮಃ |
ಓಂ ಸುರಸೈನ್ಯ ಸುರಕ್ಷಕಾಯ ನಮಃ |
ಓಂ ದೇವಸೇನಾಪತಯೇ ನಮಃ | (20)
ಓಂ ಪ್ರಾಜ್ಞಾಯ ನಮಃ |
ಓಂ ಕೃಪಾಳವೇ ನಮಃ |
ಓಂ ಭಕ್ತವತ್ಸಲಾಯ ನಮಃ |
ಓಂ ಉಮಾಸುತಾಯ ನಮಃ |
ಓಂ ಕುಮಾರಾಯ ನಮಃ |
ಓಂ ಕ್ರೌಂಚಧಾರಣಾಯ ನಮಃ |
ಓಂ ಸೇನಾನ್ಯೇ ನಮಃ |
ಓಂ ಅಗ್ನಿಜನ್ಮನೇ ನಮಃ |
ಓಂ ವಿಶಾಖಾಯ ನಮಃ |
ಓಂ ಶಂಕರಾತ್ಮಜಾಯ ನಮಃ | (30)
ಓಂ ಶಿವಸೂನವೇ ನಮಃ |
ಓಂ ಗಣಸ್ವಾಮಿನೇ ನಮಃ |
ಓಂ ಸರ್ವಸ್ವಾಮಿನೇ ನಮಃ |
ಓಂ ಸನಾತನಾಯ ನಮಃ |
ಓಂ ಅನಂತ ಶಕ್ತಿಯೇ ನಮಃ |
ಓಂ ಅಕ್ಷೋಭ್ಯಾಯ ನಮಃ |
ಓಂ ಪಾರ್ವತಿಪ್ರಿಯ ನಂದನಾಯ ನಮಃ |
ಓಂ ಗಂಗಾಸುತಾಯ ನಮಃ |
ಓಂ ಶರೋದ್ಭೂತಾಯ ನಮಃ |
ಓಂ ಅಹೂತಾಯ ನಮಃ | (40)
ಓಂ ಪಾವಕಾತ್ಮಜಾಯ ನಮಃ |
ಓಂ ಜೃಂಭಾಯ ನಮಃ |
ಓಂ ಪ್ರಜೃಂಭಾಯ ನಮಃ |
ಓಂ ಉಜ್ಜೃಂಭಾಯ ನಮಃ |
ಓಂ ಕಮಲಾಸನ ಸಂಸ್ತುತಾಯ ನಮಃ |
ಓಂ ಏಕವರ್ಣಾಯ ನಮಃ |
ಓಂ ದ್ವಿವರ್ಣಾಯ ನಮಃ |
ಓಂ ತ್ರಿವರ್ಣಾಯ ನಮಃ |
ಓಂ ಸುಮನೋಹರಾಯ ನಮಃ |
ಓಂ ಚತುರ್ವರ್ಣಾಯ ನಮಃ | (50)
ಓಂ ಪಂಚವರ್ಣಾಯ ನಮಃ |
ಓಂ ಪ್ರಜಾಪತಯೇ ನಮಃ |
ಓಂ ಅಹಃಪತಯೇ ನಮಃ |
ಓಂ ಅಗ್ನಿಗರ್ಭಾಯ ನಮಃ |
ಓಂ ಶಮೀಗರ್ಭಾಯ ನಮಃ |

ಓಂ ವಿಶ್ವರೇತಸೇ ನಮಃ |
ಓಂ ಸುರಾರಿಘ್ನೇ ನಮಃ |
ಓಂ ಹರಿದ್ವರ್ಣಾಯ ನಮಃ |
ಓಂ ಶುಭಕಾರಾಯ ನಮಃ |
ಓಂ ವಟವೇ ನಮಃ | (60)
ಓಂ ವಟವೇಷಭೃತೇ ನಮಃ |
ಓಂ ಪೂಷ್ಣೇ ನಮಃ |
ಓಂ ಗಭಸ್ತಯೇ ನಮಃ |
ಓಂ ಗಹನಾಯ ನಮಃ |
ಓಂ ಚಂದ್ರವರ್ಣಾಯ ನಮಃ |
ಓಂ ಕಳಾಧರಾಯ ನಮಃ |
ಓಂ ಮಾಯಾಧರಾಯ ನಮಃ |
ಓಂ ಕೈವಲ್ಯಾಯ ನಮಃ |
ಓಂ ಶಂಕರಾತ್ಮನೇ ನಮಃ |
ಓಂ ವಿಶ್ವಯೋನಯೇ ನಮಃ | (70)
ಓಂ ಅಮೇಯಾತ್ಮಾನೇ ನಮಃ |
ಓಂ ತೇಜೋನಿಧಯೇ ನಮಃ |
ಓಂ ಅನಾಮಯಾಯ ನಮಃ |
ಓಂ ಪರಮೇಷ್ಠಿನೇ ನಮಃ |
ಓಂ ಪರಬ್ರಹ್ಮಣೇ ನಮಃ |
ಓಂ ವೇದಗರ್ಭಾಯ ನಮಃ |
ಓಂ ವಿರಾಟ್ಸುತಾಯ ನಮಃ |
ಓಂ ಪುಳಿಂದಕನ್ಯಾಭರ್ತ್ರೇಯ ನಮಃ |
ಓಂ ಮಹಾಸಾರ ಸ್ವತಾವೃತಾಯ ನಮಃ |
ಓಂ ಆಶ್ರಿತ ಖಿಲದಾತ್ರೇ ನಮಃ | (80)
ಓಂ ಚೋರಘ್ನಾಯ ನಮಃ |
ಓಂ ರೋಗನಾಶನಾಯ ನಮಃ |
ಓಂ ಅನಂತ ಮೂರ್ತಯೇ ನಮಃ |
ಓಂ ಆನಂದಾಯ ನಮಃ |
ಓಂ ಶಿಖಂಡಿಕೃತಕೇತನಾಯ ನಮಃ |
ಓಂ ಡಂಭಾಯ ನಮಃ |
ಓಂ ಪರಮಡಂಭಾಯ ನಮಃ |
ಓಂ ಮಹಾಡಂಭಾಯ ನಮಃ |
ಓಂ ವೃಷಾಂಕಪಯೇ ನಮಃ |
ಓಂ ಕಾರಣೋಪಾತ್ತದೇಹಾಯ ನಮಃ | (90)
ಓಂ ಕಾರಣಾತೀತ ವಿಗ್ರಹಾಯ ನಮಃ |
ಓಂ ಅನೀಶ್ವರಾಯ ನಮಃ |
ಓಂ ಅಮೃತಾಯ ನಮಃ |

ಓಂ ಪ್ರಾಣಾಯಾಮ ಪರಾಯಣಾಯ ನಮಃ |
ಓಂ ವಿರುದ್ಧಹಂತ್ರೇ ನಮಃ |
ಓಂ ವೀರಘ್ನಾಯ ನಮಃ |
ಓಂ ರಕ್ತಾಸ್ಯಾಯ ನಮಃ |
ಓಂ ಸುಬ್ರಮಣ್ಯಾಯ ನಮಃ |
ಓಂ ಗುಯಾಯ ನಮಃ |
ಓಂ ಪ್ರೀತಾಯ ನಮಃ | (100)
ಓಂ ಬ್ರಾಹ್ಮಣ್ಯಾಯ ನಮಃ |
ಓಂ ಬ್ರಾಹ್ಮಣಪ್ರಿಯಾಯ ನಮಃ |
ಓಂ ವಂಶವೃದ್ಧಿಕಾರಾಯ ನಮಃ |
ಓಂ ವೇದವೇದ್ಯಾಯ ನಮಃ |
ಓಂ ಅಕ್ಷಯ ಫಲದಾಯ ನಮಃ |
ಓಂ ಸಮಸ್ತಲೋಕ ಸದ್ಗುರುವೇ ನಮಃ |
ಓಂ ಅಸುರಾಣೀಕಮರ್ಧನಾಯ ನಮಃ |
ಓಂ ವಲ್ಲೀ ದೇವಸೇನಾ ಸಮೇತ
ಓಂ ಶ್ರೀ ಸುಬ್ರಹ್ಮಣ್ಯೇಶ್ವರ ಸ್ವಾಮಿನೇ ನಮಃ | (108)

******

# <u>ಶ್ರೀ ವಲ್ಲೀ ಅಷ್ಟೋತ್ತರ ಶತನಾಮಾವಳಿ</u>

ಓಂ ಮಹಾವಲ್ಲ್ಯೈ ನಮಃ |
ಓಂ ಶ್ಯಾಮತನವೇ ನಮಃ |
ಓಂ ಸರ್ವಾಭರಣಭೂಷಿತಾಯೈ ನಮಃ |
ಓಂ ಪೀತಾಂಬರ್ಯೈ ನಮಃ |
ಓಂ ಶಶಿಸುತಾಯೈ ನಮಃ |
ಓಂ ದಿವ್ಯಾಯೈ ನಮಃ |
ಓಂ ಅಂಬುಜಧಾರಿಣ್ಯೈ ನಮಃ |
ಓಂ ಪುರುಷಾಕೃತಯೇ ನಮಃ |
ಓಂ ಬ್ರಹ್ಮ್ಯೈ ನಮಃ |
ಓಂ ನಳಿನ್ಯೈ ನಮಃ | (10)
ಓಂ ಜ್ವಾಲನೇತ್ರಿಕಾಯೈ ನಮಃ |
ಓಂ ಲಂಬಾಯೈ ನಮಃ |
ಓಂ ಪ್ರಲಂಬಾಯೈ ನಮಃ |
ಓಂ ತಾಟಂಕಿನ್ಯೈ ನಮಃ |
ಓಂ ನಾಗೇಂದ್ರತನಯಾಯೈ ನಮಃ |
ಓಂ ಶುಭರೂಪಾಯೈ ನಮಃ |
ಓಂ ಶುಭಂಕರಾಯೈ ನಮಃ |
ಓಂ ವ್ಯಲಂಬಕರಾಯೈ ನಮಃ |

ಓಂ ಪ್ರತ್ಯೂಷಾಯೈ ನಮಃ |
ಓಂ ಮಹೇಶ್ವರ್ಯೈ ನಮಃ | (20)
ಓಂ ತುಂಗಸ್ತನ್ಯೈ ನಮಃ |
ಓಂ ಸಕಂಚುಕಾಯೈ ನಮಃ |
ಓಂ ಅಣಿಮಾಯೈ ನಮಃ |
ಓಂ ಮಹಾದೇವ್ಯೈ ನಮಃ |
ಓಂ ಗುಂಜಾಯೈ ನಮಃ |
ಓಂ ಮಾಲ್ಯಧರಾಯೈ ನಮಃ |
ಓಂ ವೈಷ್ಣವ್ಯೈ ನಮಃ |
ಓಂ ತ್ರೀಭಂಗ್ಯೈಯೈ ನಮಃ |
ಓಂ ಪ್ರವಾಳವದನಾಯೈ ನಮಃ |
ಓಂ ಮನೋನ್ಮನ್ಯೈ ನಮಃ | (30)
ಓಂ ಚಾಮುಂಡಾಯೈ ನಮಃ |
ಓಂ ಸ್ಕಂದಭಾರ್ಯಾಯೈ ನಮಃ |
ಓಂ ಸತ್ಪ್ರಭಾಯೈ ನಮಃ |
ಓಂ ನಿರ್ಣಯಾಯೈ ನಮಃ |
ಓಂ ಓಜಸೇ ನಮಃ |
ಓಂ ತೇಜಸೇ ನಮಃ |
ಓಂ ಅನಾಮಯಾಯೈ ನಮಃ |
ಓಂ ಪರಮೇಷ್ಠಿನ್ಯೈ ನಮಃ |
ಓಂ ಗುರುಬ್ರಾಹ್ಮಣ್ಯೈ ನಮಃ |
ಓಂ ಚಂದ್ರವರ್ಣಾಯೈ ನಮಃ | (40)
ಓಂ ಕಳಾಧರಾಯೈ ನಮಃ |
ಓಂ ಪೂರ್ಣಚಂದ್ರಾಯೈ ನಮಃ |
ಓಂ ಸುರಾಧ್ಯಕ್ಷಾಯೈ ನಮಃ |
ಓಂ ಜಯಾಯೈ ನಮಃ |
ಓಂ ಸಿದ್ಧಸೇವಿತಾಯೈ ನಮಃ |
ಓಂ ಧ್ವಿನೇತ್ರಾಯೈ ನಮಃ |
ಓಂ ದ್ವಿಭುಜಾಯೈ ನಮಃ |
ಓಂ ಆರ್ಯಾಯೈ ನಮಃ |
ಓಂ ಇಷ್ಟಸಿದ್ಧಿಪ್ರದಾಯಕಾಯೈ ನಮಃ |
ಓಂ ಸಾಮ್ರಾಜ್ಯಾಯೈ ನಮಃ | (50)
ಓಂ ಸ್ವಧಾಕಾರಾಯೈ ನಮಃ |
ಓಂ ಕಾಂಚನಾಯೈ ನಮಃ |
ಓಂ ಹೇಮಭೂಷಣಾಯೈ ನಮಃ |
ಓಂ ಮಹಾವಲ್ಲ್ಯೈ ನಮಃ |
ಓಂ ವಾರಾಹ್ಯೈ ನಮಃ |
ಓಂ ಸದ್ಯೋಜಾತಾಯೈ ನಮಃ |

ಓಂ ಪಂಕಜಾಯೈ ನಮಃ |
ಓಂ ಸರ್ವಾಧ್ಯಕ್ಷಾಯೈ ನಮಃ |
ಓಂ ಸುರಾಧ್ಯಕ್ಷಾಯೈ ನಮಃ |
ಓಂ ಲೋಕಾಧ್ಯಕ್ಷಾಯೈ ನಮಃ | (60)
ಓಂ ಸುಂದರ್ಯೈ ನಮಃ |
ಓಂ ಇಂದ್ರಾಣ್ಯೈ ನಮಃ |
ಓಂ ವರಲಕ್ಷ್ಮ್ಯೈ ನಮಃ |
ಓಂ ಬ್ರಾಹ್ಮಿವಿದ್ಯಾಯೈ ನಮಃ |
ಓಂ ಸರಸ್ವತ್ಯೈ ನಮಃ |
ಓಂ ಕುಮಾರ್ಯೈ ನಮಃ |
ಓಂ ಭದ್ರಕಾಳ್ಯೈ ನಮಃ |
ಓಂ ದುರ್ಗಾಯೈ ನಮಃ |
ಓಂ ಜನಮೋಹಿನ್ಯೈ ನಮಃ |
ಓಂ ಸುರಾಗ್ರಜಾಯೈ ನಮಃ | (70)
ಓಂ ಸುಸ್ವಪ್ನಾಯೈ ನಮಃ |
ಓಂ ಸುಷುಪ್ತೀಚ್ಛಾಯೈ ನಮಃ |
ಓಂ ಸಾಕ್ಷಿಣ್ಯೈ ನಮಃ |
ಓಂ ಪುರಾಣ್ಯೈ ನಮಃ |
ಓಂ ಪುಣ್ಯರೂಪಿಣ್ಯೈ ನಮಃ |
ಓಂ ಕೈವಲ್ಯಾಯೈ ನಮಃ |
ಓಂ ಕಳಾತ್ಮಿಕಾಯೈ ನಮಃ |
ಓಂ ಇಂದ್ರಾಣ್ಯೈ ನಮಃ |
ಓಂ ಇಂದ್ರರೂಪಿಣ್ಯೈ ನಮಃ |
ಓಂ ಇಂದ್ರಶಕ್ತ್ಯೈಯ್ಯೈ ನಮಃ | (80)
ಓಂ ಪರಾಯಣಾಯೈ ನಮಃ |
ಓಂ ಕಾವೇರ್ಯ್ಯೈ ನಮಃ |
ಓಂ ತುಂಗಭದ್ರಾಯೈ ನಮಃ |
ಓಂ ಕ್ಷೀರಾಬ್ಧಿತನಯಾಯೈ ನಮಃ |
ಓಂ ಕೃಷ್ಣವೇಣ್ಯೈ ನಮಃ |
ಓಂ ಭೀಮನದ್ಯೈ ನಮಃ |
ಓಂ ಪುಷ್ಕರಾಯೈ ನಮಃ |
ಓಂ ಸರ್ವತೋಮುಖ್ಯೈ ನಮಃ |
ಓಂ ಮೂಲಾಧಿಪಾಯೈ ನಮಃ |
ಓಂ ಪರಾಶಕ್ತ್ಯೈ ನಮಃ | (90)
ಓಂ ಸರ್ವಮಂಗಳಕಾರಣಾಯೈ ನಮಃ |
ಓಂ ಬಿಂದುಸ್ವರೂಪಿಣ್ಯೈ ನಮಃ |
ಓಂ ಸರ್ವಾಣ್ಯೈ ನಮಃ |
ಓಂ ಯೋಗಿನ್ಯೈ ನಮಃ |

ಓಂ ಪಾಪನಾಶಿನ್ಯೈ ನಮಃ |
ಓಂ ಈಶಾನಾಯೈ ನಮಃ |
ಓಂ ಲೋಕಮಾತ್ರೇ ನಮಃ |
ಓಂ ಪೋಷಿಣ್ಯೈ ನಮಃ |
ಓಂ ಪದ್ಮವಾಸಿನ್ಯೈ ನಮಃ |
ಓಂ ಗುಣತ್ರಯಾಯೈ ನಮಃ | (100)
ಓಂ ದಯಾರೂಪಿಣ್ಯೈ ನಮಃ |
ಓಂ ನಾಯಕಾಯೈ ನಮಃ |
ಓಂ ನಾಗಧಾರಿಣ್ಯೈ ನಮಃ |
ಓಂ ಅಶೇಷಹೃದಯಾಯೈ ನಮಃ |
ಓಂ ದೇವ್ಯೈ ನಮಃ |
ಓಂ ಶರಣಾಗತರಕ್ಷಿಣ್ಯೈ ನಮಃ |
ಓಂ ಸೌಮ್ಯಾಯೈ ನಮಃ |
ಓಂ ಶ್ರೀವಲ್ಲ್ಯೈ ನಮಃ | (108)

********

## ಶ್ರೀ ದೇವಸೇನಾ ಅಷ್ಟೋತ್ತರ ಶತನಾಮಾವಳಿ

ಓಂ ಪೀತಾಂಬರ್ಯೈ ನಮಃ |
ಓಂ ದೇವಸೇನಾಯೈ ನಮಃ |
ಓಂ ದಿವ್ಯಾಯೈ ನಮಃ |
ಓಂ ಉತ್ಪಲಧಾರಿಣ್ಯೈ ನಮಃ |
ಓಂ ಅಣಿಮಾಯೈ ನಮಃ |
ಓಂ ಮಹಾದೇವ್ಯೈ ನಮಃ |
ಓಂ ಕರಾಳಿನ್ಯೈ ನಮಃ |
ಓಂ ಜ್ವಾಲನೇತ್ರೇಯೈ ನಮಃ |
ಓಂ ಮಹಾಲಕ್ಷ್ಮ್ಯೈ ನಮಃ |
ಓಂ ವಾರಾಹ್ಯೈ ನಮಃ | (10)
ಓಂ ಬ್ರಹ್ಮವಿದ್ಯಾಯೈ ನಮಃ |
ಓಂ ಸರಸ್ವತ್ಯೈ ನಮಃ |
ಓಂ ಉಷಾಯೈ ನಮಃ |
ಓಂ ಪ್ರಕೃತ್ಯೈ ನಮಃ |
ಓಂ ಶಿವಾಯೈ ನಮಃ |
ಓಂ ಸರ್ವಾಭರಣಭೂಷಿತಾಯೈ ನಮಃ |
ಓಂ ಶುಭರೂಪಾಯೈ ನಮಃ |
ಓಂ ಶುಭಂಕರ್ಯೈ ನಮಃ |
ಓಂ ಪ್ರತ್ಯೂಷಾಯೈ ನಮಃ |
ಓಂ ಮಹೇಶ್ವರ್ಯೈ ನಮಃ | (20)

ಓಂ ಅಚಿಂತ್ಯಶಕ್ತ್ಯೈ ನಮಃ |
ಓಂ ಅಕ್ಷೋಭ್ಯಾಯೈ ನಮಃ |
ಓಂ ಚಂದ್ರವರ್ಣಾಯೈ ನಮಃ |
ಓಂ ಕಳಾಧರಾಯೈ ನಮಃ |
ಓಂ ಪೂರ್ಣಚಂದ್ರಾಯೈ ನಮಃ |
ಓಂ ಸರ್ವಸ್ಯೈ ನಮಃ |
ಓಂ ಯಕ್ಷಾಯೈ ನಮಃ |
ಓಂ ಇಷ್ಟಸಿದ್ಧಿಪ್ರದಾಯಕಾಯೈ ನಮಃ |
ಓಂ ಮಾಯಾಂಧರಾಯೈ ನಮಃ |
ಓಂ ಮಹಾಮಾಯಾಯೈ ನಮಃ | (30)
ಓಂ ಪ್ರವಾಳವದನಾಯೈ ನಮಃ |
ಓಂ ಅನಂತಾಯೈ ನಮಃ |
ಓಂ ಇಂದ್ರಾಣ್ಯೈ ನಮಃ |
ಓಂ ಇಂದ್ರರೂಪಿಣ್ಯೈ ನಮಃ |
ಓಂ ಇಂದ್ರಶಕ್ತ್ಯೈ ನಮಃ |
ಓಂ ಪಾರಾಯಣ್ಯೈ ನಮಃ |
ಓಂ ಲೋಕಾಧ್ಯಕ್ಷಾಯೈ ನಮಃ |
ಓಂ ಸುರಾಧ್ಯಕ್ಷಾಯೈ ನಮಃ |
ಓಂ ಧರ್ಮಾಧ್ಯಕ್ಷಾಯೈ ನಮಃ |
ಓಂ ಸುಂದರ್ಯೈ ನಮಃ | (40)
ಓಂ ಸುಜಾತಗ್ರತಾಯೈ ನಮಃ |
ಓಂ ಸುಸ್ವರೂಪಾಯೈ ನಮಃ |
ಓಂ ಸ್ಕಂದಭಾರ್ಯಾಯೈ ನಮಃ |
ಓಂ ಸತ್ಪ್ರಭಾಯೈ ನಮಃ |
ಓಂ ಐಶ್ವರ್ಯಾಸನಾಯೈ ನಮಃ |
ಓಂ ಅನಿಂದ್ಯಾಯೈ ನಮಃ |
ಓಂ ಕಾವೇರ್ಯೈ ನಮಃ |
ಓಂ ತುಂಗಭದ್ರಾಯೈ ನಮಃ |
ಓಂ ಈಶಾನಾಯೈ ನಮಃ |
ಓಂ ಲೋಕಮಾತ್ರೇ ನಮಃ | (50)
ಓಂ ಓಜಸೇ ನಮಃ |
ಓಂ ತೇಜಸೇ ನಮಃ |
ಓಂ ಅಘಾಪಹಾಯೈ ನಮಃ |
ಓಂ ಸದ್ಯೋಜಾತಾಯೈ ನಮಃ |
ಓಂ ಸ್ವರೂಪಾಯೈ ನಮಃ |
ಓಂ ಭೋಗಿನ್ಯೈ ನಮಃ |
ಓಂ ಪಾಪನಾಶಿನ್ಯೈ ನಮಃ |
ಓಂ ಸುಖಾಸನಾಯೈ ನಮಃ |

ಓಂ ಸುಖಕಾರಾಯೈ ನಮಃ |
ಓಂ ಮಹಾಛತ್ರಾಯೈ ನಮಃ | (60)
ಓಂ ಪುರಾತನ್ಯೈ ನಮಃ |
ಓಂ ವೇದಾಯೈ ನಮಃ |
ಓಂ ವೇದರಸಾಯೈ ನಮಃ |
ಓಂ ವೇದಗರ್ಭಾಯೈ ನಮಃ |
ಓಂ ತ್ರಯೀಮಯ್ಯೈ ನಮಃ |
ಓಂ ಸಾಮ್ರಾಜ್ಯಾಯೈ ನಮಃ |
ಓಂ ಸುಧಾಕಾರಾಯೈ ನಮಃ |
ಓಂ ಕಾಂಚನಾಯೈ ನಮಃ |
ಓಂ ಹೇಮಭೂಷಣಾಯೈ ನಮಃ |
ಓಂ ಮೂಲಾಧಿಪಾಯೈ ನಮಃ | (70)
ಓಂ ಪರಾಶಕ್ತ್ಯೈ ನಮಃ |
ಓಂ ಪುಷ್ಕರಾಯೈ ನಮಃ |
ಓಂ ಸರ್ವತೋಮುಖ್ಯೈ ನಮಃ |
ಓಂ ದೇವಸೇನಾಯೈ ನಮಃ |
ಓಂ ಉಮಾಯೈ ನಮಃ |
ಓಂ ಪಾರ್ವತ್ಯೈ ನಮಃ |
ಓಂ ವಿಶಾಲಕ್ಷ್ಯೈ ನಮಃ |
ಓಂ ಹೇಮಾವತ್ಯೈ ನಮಃ |
ಓಂ ಸನಾತನಾಯೈ ನಮಃ |
ಓಂ ಬಹುವರ್ಣಾಯೈ ನಮಃ | (80)
ಓಂ ಗೋಪವತ್ಯೈ ನಮಃ |
ಓಂ ಸರ್ವಸ್ವಾಯೈ ನಮಃ |
ಓಂ ಮಂಗಳಕಾರಿಣ್ಯೈ ನಮಃ |
ಓಂ ಅಂಬಾಯೈ ನಮಃ |
ಓಂ ಗಣಾಂಬಾಯೈ ನಮಃ |
ಓಂ ವಿಶ್ವಾಂಬಾಯೈ ನಮಃ |
ಓಂ ಸುಂದರ್ಯೈ ನಮಃ |
ಓಂ ತ್ರಿಪುರಸುಂದರ್ಯೈ ನಮಃ |
ಓಂ ಮನೋನ್ಮನ್ಯೈ ನಮಃ |
ಓಂ ಮನೋನ್ಮಯೈ ನಮಃ | (90)
ಓಂ ಚಾಮುಂಡಾಯೈ ನಮಃ |
ಓಂ ನಾಯಿಕಾಯೈ ನಮಃ |
ಓಂ ನಾಗಧಾರಿಣ್ಯೈ ನಮಃ |
ಓಂ ಸ್ವಧಾಯೈ ನಮಃ |
ಓಂ ವಿಶ್ವತೋಮುಖ್ಯೈ ನಮಃ |
ಓಂ ಸುರಾಧ್ಯಕ್ಷಾಯೈ ನಮಃ |

ಓಂ ಸರ್ವೇಶ್ವರ್ಯೈ ನಮಃ |
ಓಂ ಗುಣತ್ರಯಾಯೈ ನಮಃ |
ಓಂ ದಯಾರೂಪಿಣ್ಯೈ ನಮಃ |
ಓಂ ಅಭಿಯಾತಿಗಾಯೈ ನಮಃ | (100)
ಓಂ ಪ್ರಾಣಶಕ್ತ್ಯೈ ನಮಃ |
ಓಂ ಪರಾದೇವ್ಯೈ ನಮಃ |
ಓಂ ಶರಣಾಗತರಕ್ಷಣಾಯೈ ನಮಃ |
ಓಂ ಅಶೇಷಹೃದಯಾಯೈ ನಮಃ |
ಓಂ ದೇವ್ಯೈ ನಮಃ |
ಓಂ ದೇವಾಪೂಜ್ಯಾಯೈ ನಮಃ |
ಓಂ ಸಿದ್ಧಿದಾಯೈ ನಮಃ |
ಓಂ ಲಕ್ಷ್ಮ್ಯೈ ನಮಃ | (108)

******

# ಶ್ರೀ ಸುಬ್ರಹ್ಮಣ್ಯ ವ್ರತ

## ಪ್ರಥಮ ಅಧ್ಯಾಯ

## **ಶ್ರೀಕ್ಷೇತ್ರ ಪಳನಿ ಮಹಾತ್ಮೆ**

ಪೂರ್ವಕಾಲದಲ್ಲಿ ಪ್ರಸಿದ್ಧ ಪುಣ್ಯಕ್ಷೇತ್ರವಾದ ಪಳನಿಯ ಸ್ವಲ್ಪದೂರದಲ್ಲಿ ವಲ್ಲೀಪುರ ಎಂಬ ಗ್ರಾಮವಿತ್ತು. ಆ ಗ್ರಾಮದಲ್ಲಿ ನಟರಾಜನ್ ಹೆಸರಿನ ವ್ಯಕ್ತಿ ಇರುತ್ತಿದ್ದ. ಅವನು ಬಟ್ಟೆ ನೇಯಿಗೆಯ ಕೆಲಸದಲ್ಲಿ ಅತ್ಯಂತ ಪ್ರಾವೀಣ್ಯತೆಯನ್ನು ಪಡೆದಿದ್ದ. ಬಹಳ ನಿರಾಡಂಬರವಾದ ಜೀವನವನ್ನು ಸಾಗಿಸುತ್ತಾ, ತಾನು ಸಂಪಾದಿಸಿದರಲ್ಲಿ ಸ್ವಲ್ಪ ದಾನ ಧರ್ಮಕ್ಕೂ ವಿನಿಯೋಗಿಸುತ್ತಿದ್ದ. ಅವನ ಹೆಂಡತಿ ಸುಮತಿ ಕೂಡ ಗಂಡನಿಗೆ ಎಲ್ಲಾ ವಿಧದಲ್ಲೂ ಸಹಾಯಮಾಡುತ್ತಿದ್ದಳು. ಗಂಡ-ಹೆಂಡತಿ ಇಬ್ಬರೂ ಶ್ರೀ ಸುಬ್ರಹ್ಮಣ್ಯೇಶ್ವರ ದೇವರ ಭಕ್ತರಾಗಿ, ಯಾವಾಗಲೂ ಆ ದೇವರನ್ನೇ ನೆನೆಯುತ್ತಾ ಇರುತ್ತಿದ್ದರು.

ನಟರಾಜನ್ ದಂಪತಿಗಳಿಗೆ ಎಲ್ಲಾ ಇದ್ದರೂ, ಮಕ್ಕಳಿಲ್ಲದ ಕೊರತೆ ನೋವನ್ನುಂಟು ಮಾಡುತ್ತಿತ್ತು. ಸಂತಾನಕ್ಕಾಗಿ ಅವರೆಷ್ಟೋ ವ್ರತಗಳನ್ನು ಮಾಡಿದರು. ಪೂಜೆಗಳನ್ನು ಮಾಡಿದರು. ಆದರೂ ಫಲ ಸಿಗಲಿಲ್ಲ. ವಿವಾಹವಾಗಿ ಹನ್ನೆರಡು ವರ್ಷಗಳು ಕಳೆದರೂ ಸಂತಾನಭಾಗ್ಯ ಇಲ್ಲದಿರುವುದು ಅವರನ್ನು ಯಾವಾಗಲೂ ನೋವುಂಟು ಮಾಡುತ್ತಿತ್ತು. ಪ್ರತಿದಿನ ಬೆಳಿಗ್ಗೆದ್ದು ಶ್ರೀ ಕುಮಾರಸ್ವಾಮಿಯನ್ನು ತಮಗೆ ಸಂತಾನವನ್ನು ಪ್ರಸಾದಿಸೆಂದು ಪ್ರಾರ್ಥಿಸುತ್ತಿದ್ದರು. ಅವರೊಟ್ಟಿಗಿರುವವರೆಲ್ಲರೂ ಮರಿಮಕ್ಕಳೊಂದಿಗೆ ಆಟವಾಡುತ್ತಿದ್ದರೆ ತಮಗೆ ಮಾತ್ರ ಮಕ್ಕಳಿಲ್ಲ ಎಂದು ಬಾಧೆಪಡುತ್ತಿದ್ದರು. ಯಾವುದೋ ಜನ್ಮದಲ್ಲಿ ಮಾಡಿದ ಪಾಪದಿಂದಾಗಿ ತಮಗೆ ಮಕ್ಕಳಭಾಗ್ಯ ಇಲ್ಲವೆಂದು ಎಣಿಸುತ್ತಿದ್ದರು. ದಿನದಿನಕ್ಕೆ ಈ ಬಾಧೆ ಅವರನ್ನು ಕುಗ್ಗಿಸುತ್ತಿತ್ತು.

ಆದರೇ, ಆ ದಂಪತಿಗಳು ಮಾತ್ರ ಶ್ರೀ ಕುಮಾರಸ್ವಾಮಿಯನ್ನು ಪ್ರಾರ್ಥಿಸುತ್ತಿರುವುದನ್ನು ಬಿಡಲಿಲ್ಲ. ನಿತ್ಯ ಯಥಾವಿಧಿಯಾಗಿ ಆ ದೇವರನ್ನು ಪ್ರಾರ್ಥಿಸುತ್ತಾ ಇದ್ದಾರೆ. ಶ್ರೀ ಸುಬ್ರಹ್ಮಣ್ಯೇಶ್ವರನು ಭಕ್ತವತ್ಸಲನು. ತನ್ನನ್ನು ತ್ರಿಕರಣಶುದ್ಧಿಯಾಗಿ ನಂಬಿ ಪ್ರಾರ್ಥಿಸುವವರನ್ನು ಕಣ್ಣಿನ ರೆಪ್ಪೆಯ ಹಾಗೆ ಕಾಪಾಡುವ ಅಮೃತಮೂರ್ತಿ. ಆ ದೇವರನ್ನು ಮನಃಸ್ಫೂರ್ತಿಯಾಗಿ ಪ್ರಾರ್ಥಿಸುವವರಿಗೆ ಸರ್ವಸೌಭಾಗ್ಯಗಳೂ ಲಭಿಸುತ್ತದೆ. ಯಾವ ರೀತಿಯ ಋಣಬಾಧೆಗಳೂ ಇರುವುದಿಲ್ಲ. ಅಕಾಲಮೃತ್ಯು ಭಯವಿರುವುದಿಲ್ಲ.

ದಿನಗಳು ಹೀಗೆ ಉರುಳುತ್ತಿರುವಾಗ, ಒಂದುದಿನ ಆ ಊರಿಗೆ ಒಬ್ಬ ಸಾಧು ಬಂದನು. ಆ ಸಾಧು ಬಹಳ ಮಹಿಮೆಯುಳ್ಳವನೆಂದು ಪ್ರಜೆಗಳೆಲ್ಲರೂ ಹೇಳಿಕೊಂಡರು. ನಟರಾಜನ್ ದಂಪತಿಗಳು ಆ ಸನ್ಯಾಸಿಗೆ ನಮಸ್ಕರಿಸಿ ತಮ್ಮ ನೋವನ್ನು ಹೇಳಿದರು. ಆಗ ಆ ಸಾಧು ಅವರಿಗೆ ಹೀಗೆ ಹೇಳಿದನು. ಮಕ್ಕಳೇ, ನೀವು ಪೂರ್ವಜನ್ಮದಲ್ಲಿ ಮಾಡಿದ ಒಂದು ಪಾಪದ ಸಲುವಾಗಿ ನಿಮಗೆ ಸಂತಾನವಾಗುವುದು ನಿಧಾನವಾಗಿದೆ. ಮುಂಬರುವ ಮಂಗಳವಾರ ಒಳ್ಳೆಯ ಪುಣ್ಯದಿನ. ಬಹಳ ಪವಿತ್ರವಾದದ್ದು. ಷಷ್ಟಿ ತಿಥಿ, ಕೃತಿಕಾ ನಕ್ಷತ್ರದಲ್ಲಿ ಸೇರಿಕೊಂಡಿದೆ. ಬಹಳಷ್ಟು ವರ್ಷಗಳಾದರೂ ಕೂಡಾ ಈ ವಿಧವಾಗಿ ಬರುವುದಿಲ್ಲ. ಬಹಳ ಪವಿತ್ರವಾದ ಆ ದಿನ ನೀವಿಬ್ಬರೂ ಪಳನಿ ಪುಣ್ಯಕ್ಷೇತ್ರಕ್ಕೆ ಹೋಗಿ ಕಾರ್ತಿಕೇಯನನ್ನು ದರ್ಶಿಸಿರಿ. ಆ ದೇವರ

ದಿವ್ಯದರ್ಶನದಿಂದ ನಿಮ್ಮ ಪೂರ್ವಜನ್ಮದ ಪಾಪವು ನಶಿಸಿ, ಶೀಘ್ರದಲ್ಲೇ ಬಂಗಾರದಂತಹ ಮಗ ಹುಟ್ಟುತ್ತಾನೆಂದು ಹೇಳಿದನು.

ಸೋಮವಾರ ಸಾಯಂಕಾಲ ನಟರಾಜನ್ ದಂಪತಿಗಳು ಎತ್ತಿನಗಾಡಿಯಲ್ಲಿ ಪಳನಿಗೆ ಪ್ರಯಾಣಿಸಿದರು. ಇವರ ಊರಿಂದ ಪಳನಿಗೆ ನಾಲ್ಕೈದು ಗಂಟೆಗಳ ಪ್ರಯಾಣ. ರಾತ್ರಿ ಅಲ್ಲೇ ಇದ್ದು, ಮರುದಿನ ಮಂಗಳವಾರದ ದಿನ ಆ ದೇವರನ್ನು ದರ್ಶನ ಮಾಡೋಣವೆಂದು ಎಣಿಸಿದರು. ಅಷ್ಟರಲ್ಲಿ ಒಂದು ಗುಡ್ಡಗಾಡು ಪ್ರದೇಶ ಬಂತು. ಆ ಗುಡ್ಡಗಾಡಿನ ಪಕ್ಕದಲ್ಲೇ ಗಾಡಿ ನಿಧಾನವಾಗಿ ಹೋಗುತ್ತಿರುವಾಗ, ಒಂದೇ ಸಾರಿ ಎರಡು ಎತ್ತುಗಳೂ ನಿಂತುಹೋದವು. ಗಾಡಿ ಮುಂದಕ್ಕೆ ಸಾಗಲಿಲ್ಲ. ಗಾಡಿ ನಡೆಸುವವನು ಎಷ್ಟು ಪ್ರಯತ್ನಿಸಿದರೂ ಎತ್ತುಗಳು ಯಾಕೆ ಮುಂದಕ್ಕೆ ಸಾಗುತ್ತಿಲ್ಲ ಎಂದು ಅರ್ಥವಾಗಲಿಲ್ಲ. ನಟರಾಜನ್.ನೊಟ್ಟಿಗೆ ಕೂಡಿ ಇಬ್ಬರೂ ಗಾಡಿಯಿಂದ ಕೆಳಗಿಳಿದರು. ಎದುರಲ್ಲಿ ಕಾಣಿಸಿದ ದೃಶ್ಯ ನೋಡಿ ಆಶ್ಚರ್ಯಪಟ್ಟರು. ಭಯ ಕೂಡಾ ಆಯಿತು. ಎದುರಲ್ಲಿ ಎರಡು ಹಾವುಗಳು ಹೆಡೆ ಬಿಡಿಸಿ ನೃತ್ಯವನ್ನು ಮಾಡುತ್ತಿವೆ. ಅವುಗಳನ್ನು ನೋಡಿ ಹೆದರಿ ಎತ್ತುಗಳು ಮುಂದಕ್ಕೆ ಸಾಗುತ್ತಿಲ್ಲ.

ಗಾಡಿಯವನು ಯಾವುದೋ ಶಬ್ದ ಮಾಡಲು ಹೋದಾಗ, ನಟರಾಜನ್ ಬೇಡವೆಂದು ಹೆಚ್ಚರಿಸಿದನು. ಆ ಹಾವುಗಳಿಗೆ ನಮಸ್ಕರಿಸಿ ತಮಗೆ ದಾರಿ ಕೊಡೆಂದು ಕೇಳಿದನು. ಆದರೆ ಅವು ಮಾತ್ರ ಕದಲಲಿಲ್ಲ. ಅಲ್ಲೇ ನೃತ್ಯವನ್ನು ಆಡತೊಡಗಿದವು. ಹಾಗೆ ಸುಮಾರಾಗಿ ಅರ್ಧಗಂಟೆ ಕಳೆಯಿತು. ಇಷ್ಟರಲ್ಲಿ ಅವರ ದಾರಿಯಲ್ಲೇ ಸ್ವಲ್ಪ ಮುಂದೆಲ್ಲಿರುವ ಪಕ್ಕದ ಗುಡ್ಡದ ಮೇಲಿಂದ ದೊಡ್ಡ ಬಂಡೆಕಲ್ಲು ಅತ್ಯಂತ ವೇಗವಾಗಿ ಉರುಳುತ್ತಾ ಎದುರಲ್ಲಿರುವ ರಸ್ತೆ ಮೇಲೆ ಬಿದ್ದು ತುಂಡಾಯಿತು. ತುಂಡುಗಳೆಲ್ಲಾ ಆಚೆಈಚೆ ಚದುರಿಬಿತ್ತು. ಇದು ಜರುಗಿದ ಸ್ವಲ್ಪಹೊತ್ತಿನಲ್ಲಿ ಆ ಎರಡು ಹಾವುಗಳು ಪಕ್ಕದಲ್ಲೇ ಇದ್ದ ಪೊದೆಗೆ ಸರ್ರನೆ ಹರಿದು ಹೋದವು.

ನಟರಾಜನಿಗೆ ಜರುಗಿದ್ದು ಅರ್ಥವಾಯಿತು. ಆ ಶ್ರೀ ಸುಬ್ರಹ್ಮಣ್ಯೇಶ್ವರನೇ ತಮ್ಮನು ರಕ್ಷಿಸಲು ಈ ವಿಧವಾಗಿ ಬಂದನು. ಇಲ್ಲದಿದ್ದರೆ, ಮುಂದಕ್ಕೆ ಸಾಗುವಾಗ ಆ ಬಂಡೆಕಲ್ಲು ತಮ್ಮ ಗಾಡಿ ಮೇಲೆ ಬಿದ್ದು ತಾವೆಲ್ಲರೂ ಇಹಲೋಕ ತ್ಯಜಿಸುತ್ತಿದ್ದೆವು. ಆ ಕಾರ್ತಿಕೇಯನು ತಮ್ಮನ್ನು ರಕ್ಷಿಸಲು ಮುಂದಕ್ಕೆ ಹೋಗದ ಹಾಗೇ ಹಾವುಗಳ ರೂಪದಲ್ಲಿ ಬಂದನೆಂದು ಗ್ರಹಿಸಿದನು. ತಮ್ಮನ್ನು ರಕ್ಷಿಸಿದ್ದಕ್ಕೆ ಆ ದೇವರನ್ನು ಎಷ್ಟೋ ವಿಧಾನದಿಂದ ಸ್ತುತಿಸಿದನು. ಪ್ರಯಾಣವನ್ನು ಮುಂದುವರಿಸಿ ರಾತ್ರಿ ಪಳನಿಕ್ಷೇತ್ರವನ್ನು ಸೇರಿದನು. ಬೆಳಿಗ್ಗೆ ಆ ಕ್ಷೇತ್ರದಲ್ಲಿ ನಿತ್ಯ ಸನ್ನಿಧಾನವುಳ್ಳ ಆ ಶ್ರೀ ಬಾಲಸುಬ್ರಹ್ಮಣ್ಯೇಶ್ವರನ ದರ್ಶನವನ್ನು ಮಾಡಿದನು. ಆ ನಂತರ ಸಾಯಂಕಾಲ ತಿರುಗಿ ಹೊರಟು ತಮ್ಮ ಗ್ರಾಮಕ್ಕೆ ಸೇರಿಕೊಂಡರು. ಆ ದೇವರ ಅನುಗ್ರಹದಿಂದ ಸ್ವಲ್ಪ ಸಮಯದಲ್ಲೇ ಅವರಿಗೆ ಸುಂದರವಾದ ಮಗ ಹುಟ್ಟಿದನು. ಶ್ರೀ ಸುಬ್ರಹ್ಮಣ್ಯ ದೇವರು ಪ್ರಸಾದಿಸಿದ್ದು, ಆದ್ದರಿಂದ ಅವನಿಗೆ ಬಾಲಸುಬ್ರಹ್ಮಣ್ಯಂ ಎಂದು ಹೆಸರಿಟ್ಟರು. ಪುತ್ರನಿಂದ ಕೂಡಿ ನಟರಾಜನ್ ದಂಪತಿಗಳು ಆ ದೇವರನ್ನು ಸೇವಿಸುತ್ತಾ ಬದುಕ್ಕಿದ್ದಷ್ಟು ಕಾಲ ಸುಖವಾಗಿ ಜೀವಿಸಿದರು.

ಪ್ರಥಮ ಅಧ್ಯಾಯವು ಸಂಪೂರ್ಣವಾಯಿತು

ಸುಬ್ರಹ್ಮಣ್ಯಂ ಸುಬ್ರಹ್ಮಣ್ಯಂ ಷಣ್ಮುಖಾನಾಥಂ ಸುಬ್ರಹ್ಮಣ್ಯಂ |
ಸುಬ್ರಹ್ಮಣ್ಯಂ ಸುಬ್ರಹ್ಮಣ್ಯಂ ಶಂಕರಪುತ್ರಂ ಸುಬ್ರಹ್ಮಣ್ಯಂ ||

******

ಎರಡನೇ ಅಧ್ಯಾಯ

# ಚಿನ್ನಶೆಟ್ಟಿಯ ಕಥೆ

ತಮಿಳುನಾಡಿನ ಶ್ರೀ ಸುಬ್ರಹ್ಮಣ್ಯ ಕ್ಷೇತ್ರಗಳಲ್ಲಿ ತಿರುತ್ತಣಿ ಬಹಳ ಪ್ರಸಿದ್ಧವಾದ ಕ್ಷೇತ್ರ. ಇಲ್ಲಿ ಬೆಳಗಿದ ಶ್ರೀ ಸುಬ್ರಹ್ಮಣ್ಯೇಶ್ವರನು ಬಹಳ ಮಹಿಮಾನ್ವಿತನೆಂದು ಆರಾಧಿಸಲ್ಪಡುತ್ತಿದ್ದಾನೆ. ಶ್ರೀ ಸುಬ್ರಹ್ಮಣ್ಯೇಶ್ವರನಿಗೆ ಕಾರ್ತಿಕೇಯ, ಸ್ವಾಮಿನಾಥನ್, ವೇಲಾಯುಧಂ, ಕುಮಾರಸ್ವಾಮಿ, ಷಣ್ಮುಖ ಎಂಬ ಹೆಸರುಗಳು ಕೂಡಾ ಪ್ರಸಿದ್ಧ. ದೇವರ ವಾಹನ ನವಿಲು. ದೇವರ ಧ್ವಜದಮೇಲೆ ಕೋಳಿ ಇರುತ್ತದೆ. ಕೋಳಿ ಜ್ಞಾನಕ್ಕೆ ಪ್ರತೀಕ. ಹಾವನ್ನು ದೇವರ ಸಂಕೇತವೆಂದು ಭಾವಿಸುತ್ತಾರೆ.

ಪೂರ್ವಕಾಲದಲ್ಲಿ ತಿರುತ್ತಣಿ ಸಮೀಪದ ಪುತ್ತೂರಲ್ಲಿ ಚಿನ್ನಶೆಟ್ಟಿ ಎಂಬ ವ್ಯಾಪಾರಸ್ಥನು ಇದ್ದನು. ಅವನು ಬೆಳ್ಳಿ, ಬಂಗಾರದ ವ್ಯಾಪಾರದೊಟ್ಟಿಗೆ ಬಟ್ಟೆಗಳ ವ್ಯಾಪಾರವನ್ನು ಕೂಡಾ ಮಾಡಿ ತುಂಬಾ ಹಣವನ್ನು ಸಂಪಾದಿಸಿದನು. ಆದರೇ ವಿಪರೀತವಾದ ಜಿಪುಣತನದಿಂದ ಇರುವವನು. ಯಾವ ಬಡವನಿದ್ದರೂ, ಯಾವುದೇ ರೀತಿಯ ಸಹಾಯ ಮಾಡುತ್ತಿರಲಿಲ್ಲ. ಅವನಿಗೆ ಬಹಳ ಕಾಲ ಸಂತಾನ ಆಗಲಿಲ್ಲ. ಒಂದುದಿನ ತನಗೆ ಸಂತಾನವಾದರೆ, ಒಂದು ಅಂಗೈಯಷ್ಟು ಉದ್ದದ ಬೆಳ್ಳಿಯ ಸರ್ಪದ ರೂಪವನ್ನು ತಿರುತ್ತಣಿ ದೇವರಿಗೆ ಉಡುಗೊರೆಯಾಗಿ ಸಮರ್ಪಿಸುತ್ತೇನೆಂದು ಬೇಡಿಕೊಂಡನು. ಕಾರ್ತಿಕೇಯನ ಅನುಗ್ರಹದಿಂದ ಹೆಂಡತಿ ಚಿತ್ರಾವತಿ ಬೇಗನೆ ಗರ್ಭವತಿಯಾಗಿ ಮುದ್ದಾದ ಗಂಡುಮಗುವನ್ನು ಹೆತ್ತಳು. ಅನತಿಕಾಲದಲ್ಲೇ ಆ ದೇವರ ಅನುಗ್ರಹದಿಂದ ಚಿನ್ನ ಶೆಟ್ಟಿಯ ವ್ಯಾಪಾರ ಕೂಡಾ ಅಭಿವೃದ್ಧಿಯಾಯಿತು.

ಚಿನ್ನಶೆಟ್ಟಿ ವ್ಯಾಪಾರದ ಗೌಜಿನಲ್ಲಿ ಶ್ರೀ ಸುಬ್ರಹ್ಮಣ್ಯೇಶ್ವರ ದೇವರಿಗೆ ಕೊಟ್ಟ ಮಾತನ್ನು ಸಂಪೂರ್ಣವಾಗಿ ಮರೆತುಹೋದನು. ಒಂದುದಿನ ಚಿನ್ನಶೆಟ್ಟಿಯ ಮಗನಿಗೆ ಯಾವುದೋ ತೀವ್ರವಾದ ರೋಗ ಬಂತು. ಎಷ್ಟು ಮದ್ದುಗಳನ್ನು ಮಾಡಿದರೂ ವಾಸಿಯಾಗಲಿಲ್ಲ. ಆಗ ಚಿನ್ನಶೆಟ್ಟಿಗೆ ತಾನು ಕಾರ್ತಿಕೇಯನಿಗೆ ಕೊಟ್ಟ ಮಾತು ನೆನಪಾಯಿತು. ಸ್ವಾಮಿ ನನ್ನ ಮಗನನ್ನು ಈ ಕಾಯಿಲೆಯಿಂದ ಕಾಪಾಡು. ಪೂರ್ತಿ ಆರೋಗ್ಯವನ್ನು ಪ್ರಸಾದಿಸು. ನಿನಗೆ ಅಂಗೈಯಷ್ಟು ಉದ್ದದ ಎರಡು ಸರ್ಪಗಳನ್ನು ಸಮರ್ಪಿಸುತ್ತೇನೆ ಎಂದು ಮನಸ್ಸಲ್ಲೇ ಬೇಡಿಕೊಂಡನು. ಮಗುವಿನ ಅನಾರೋಗ್ಯವು ನಿಧಾನವಾಗಿ ಕಡಿಮೆಯಾಗಿ ಸ್ವಲ್ಪಸಮಯದಲ್ಲೇ ಪೂರ್ತಿಯಾಗಿ ಆರೋಗ್ಯವಂತನಾದನು.

ಇಷ್ಟರಲ್ಲಿ ದಸರಾ, ದೀಪಾವಳಿ ಹಬ್ಬಗಳು ಬಂತು. ಚಿನ್ನಶೆಟ್ಟಿಯ ವ್ಯಾಪಾರಕ್ಕೆಲ್ಲಾ ಇದು ವಿಪರೀತ ಸಮಯವಾದುದರಿಂದ ಒಂದುಕ್ಷಣ ಕೂಡಾ ಬಿಡುವಿಲ್ಲದೆ ಹೋಯಿತು. ಷಣ್ಮುಖನಿಗೆ ಕೊಟ್ಟ ಮಾತು ಮರೆತುಬಿಟ್ಟನು. ಮಧ್ಯದಲ್ಲಿ ಒಂದುಸಾರಿ ನೆನಪಾದರೂ, ಈ ಹಬ್ಬ ಮುಗಿದ ಮೇಲೆ ಹೊಗಬಹುದೆಂದು ಕೊಂಡನು. ಶ್ರೀ ಸುಬ್ರಹ್ಮಣ್ಯೇಶ್ವರ ಸ್ವಾಮಿಗೆ ಕೋಪ ಬಂತು. ಮನುಷ್ಯ ಗುಣ ಇಷ್ಟೇ ಎಂದುಕೊಂಡನು. ತನ್ನ ಶಕ್ತಿಯನ್ನು ತೋರಿಸಬೇಕೆಂದು ಕೊಂಡನು. ಇಲ್ಲದಿದ್ದರೆ ಚಿನ್ನಶೆಟ್ಟಿಗೆ ಬುದ್ಧಿಬಾರದೆಂದು ತಿಳಿದನು.

ಆ ಮರುದಿನ ಮಧ್ಯರಾತ್ರಿಯಲ್ಲಿ ಚಿನ್ನಶೆಟ್ಟಿಯು ಗಟ್ಟಿಯಾಗಿ ಅರಚುತ್ತಾ ಎದ್ದನು. ದೊಡ್ಡ ಸರ್ಪಗಳು ತನ್ನ ಮಂಚದ ಸುತ್ತಾ ತಿರುಗುತ್ತಿರುವ ಹಾಗೆ ಕನಸ್ಸು ಬಂತು. ಆ ಕನಸ್ಸಿನಿಂದ ಭಯಪಟ್ಟು ಎಚ್ಚರಿಕೆಯಾಗಿ ಕಣ್ಣು ತೆರೆದು ಮಂಚದಮೇಲೆ ಕುಳಿತುಕೊಂಡನು. ಚಿನ್ನಶೆಟ್ಟಿಗೆ

ನಿಜವಾಗಿ ಭಯಂಕರವಾಗಿ ಸರ್ಪಗಳು ಹೆಡೆಬಿಚ್ಚಿ ಅಲ್ಲಾಡಿಸುತ್ತಿರುವುದು ನೆಲದ ಮೇಲೆ ಕಾಣಿಸಿತು. ಚಿನ್ನಶೆಟ್ಟಿಯ ಪ್ರಾಣ ಪ್ರಾಣವಾಗಿ ಉಳಿಯಲಿಲ್ಲ. ಒಂದೇಸಾರಿ ಇಷ್ಟು ಸರ್ಪಗಳು ಎಲ್ಲಿಂದ ಬಂತೊ ಎಂದು ಭಯಪಟ್ಟು ಹೆಂಡತಿಯನ್ನು ನಿದ್ರೆಯಿಂದ ಎಬ್ಬಿಸಿದನು.

ಭಯದಿಂದ ನಡುಗುತ್ತಾ ಹೆಂಡತಿಯನ್ನು ತಮ್ಮ ಮಂಚದ ಸುತ್ತಲೂ ಇರುವ ಸರ್ಪಗಳನ್ನು ನೋಡೆಂದನು. ಆಶ್ಚರ್ಯ ಕರವಾಗಿ ಹೆಂಡತಿ ಚಿತ್ರಾವತಿಗೆ ಒಂದು ಸರ್ಪ ಕೂಡಾ ಕಾಣಲಿಲ್ಲ. ಏನೂಂದ್ರೆ, ನಿಮಗೆ ಯಾವುದೋ ಕನಸ್ಸು ಬಂದ ಹಾಗೆ ಇದೆ. ಇಲ್ಲಿ ಒಂದು ಹಾವೂ ಕೂಡಾ ಇಲ್ಲ. ಕಣ್ಣುಮುಚ್ಚಿ ಮಲಗಿ ಎಂದು ಹೇಳಿ ತಾನು ನಿದ್ರೆಹೋದಳು. ಆದರೆ, ಚಿನ್ನಶೆಟ್ಟಿಗೆ ಸ್ವಲ್ಪವೂ ನಿದ್ರೆ ಬರಲಿಲ್ಲ. ಕಾಲು ಕೆಳಗಿಟ್ಟರೆ ಆ ಸರ್ಪಗಳು ಕಚ್ಚಿಬಿಡುವ ಹಾಗಿವೆ. ಸ್ವಲ್ಪ ಸಮಯದಲ್ಲಿ ಮತ್ತೆ ಹೆಂಡತಿಯನ್ನು ನಿದ್ರೆಯಿಂದ ಎಬ್ಬಿಸಿದನು. ಚಿತ್ರಾವತಿ ಸಿಟ್ಟಾಗಿ ಮಂಚದಿಂದ ಇಳಿದು ವಿಭೂತಿಯನ್ನು ತಂದುಕೊಟ್ಟು ಇದನ್ನು ಹಚ್ಚಿಕೊಂಡು ಮಲಗಿ ಎಂದಳು. ವಿಭೂತಿಯನ್ನು ಹಚ್ಚಿಕೊಂಡನು ಆದರೆ ನಿದ್ರೆ ಬರುತ್ತಿಲ್ಲ. ಕಣ್ಣು ಬಿಟ್ಟು ನೋಡಿದರೆ ಮತ್ತೆ ಬುಸುಗುಡುತ್ತಾ ಕನಿಷ್ಠ ಹತ್ತು ಹಾವುಗಳು ಕಾಣಿಸಿತು.

ಆಗ ಚಿನ್ನಶೆಟ್ಟಿಗೆ ತಾನು ಷಣ್ಮುಖನಿಗೆ ಕೊಟ್ಟ ಮಾತು ನೆನಪಾಯಿತು. ಮಾತು ತಪ್ಪಿದ್ದಕ್ಕೆ ಆ ಸ್ವಾಮಿಯ ಕೋಪಕ್ಕೆ ಗುರಿಯಾದ್ದರಿಂದ ಈ ವಿಧವಾಗಿ ಜರುಗಿದೆ ಎಂದು ಗ್ರಹಿಸಿದನು. ಸ್ವಾಮಿ ಕಾರ್ತಿಕೇಯ! ನನ್ನನ್ನು ಕ್ಷಮಿಸು ತಂದೇ! ಈ ಕ್ಷಣದಲ್ಲೇ ನಾನು ಆ ಬೆಳ್ಳಿಯ ಸರ್ಪದ ಮೂರ್ತಿಯನ್ನು ತಯಾರುಮಾಡಲು ಬೇಕಾದ ಹಣವನ್ನು ತೆಗೆದಿಡುತ್ತೇನೆ. ನಾಳೆ ಆ ಕೆಲಸವನ್ನು ಮಾಡುತ್ತೇನೆ. ನನ್ನನ್ನು ಕ್ಷಮಿಸು ಎಂದು ಕೆನ್ನೆಗೆ ಹೊಡೆದುಕೊಂಡನು. ಕರುಣಾಮಯನಾದ ಷಣ್ಮುಖನು ಚಿನ್ನಶೆಟ್ಟಿಯನ್ನು ಅನುಗ್ರಹಿಸಿದನು. ಕ್ಷಣದಲ್ಲಿ ಅಲ್ಲಿದ್ದ ಸರ್ಪಗಳೆಲ್ಲಾ ಮಾಯವಾದುವು. ಚಿನ್ನಶೆಟ್ಟಿ ಸ್ವಲ್ಪವೂ ಆಲಸ್ಯಮಾಡದೇ ಮಂಚವಿಳಿದು ಧನಾಗಾರಕ್ಕೆ ಹೋಗಿ ಸ್ವಾಮಿಯ ಕೆಲಸಕ್ಕೆ ಬೇಕಾದ ಹಣವನ್ನು ತೆಗೆದು, ಒಂದು ಪೊಟ್ಟಣದಲ್ಲಿ ಕಟ್ಟಿ ಬೇರೆಯಾಗಿ ಇಟ್ಟನು.

ಮರುದಿನ ಬೆಳಿಗ್ಗೆ, ಆ ಹಣವನ್ನು ತೆಗೆದುಕೊಂಡು ಬೆಳ್ಳಿಯಿಂದ ಒಳ್ಳೆಯ ಸರ್ಪದ ಪ್ರತಿಮೆಗಳನ್ನು ಮಾಡಿಸಿ, ಆ ಕೂಡಲೇ ಬಂದ ಮಂಗಳವಾರದ ದಿನ ತಿರುತ್ತಣಿಗೆ ಹೋಗಿ ದೇವರಿಗೆ ಸಮರ್ಪಿಸಿದನು. ಆಗಿನಿಂದ ಚಿನ್ನಶೆಟ್ಟಿ ಒಳ್ಳೆಯ ಮನಸ್ಸಿನಿಂದ ಜೀವಿಸುತ್ತಾ, ಎಷ್ಟೋ ದಾನ-ಧರ್ಮಗಳನ್ನು ಮಾಡುತ್ತಾ ಕಾಲಕಳೆದನು. ಜೀವಿಸಿದ್ದಷ್ಟು ಕಾಲ ಆ ದೇವರನ್ನು ಸೇವಿಸುತ್ತಾ ಕೊನೆಗೆ ಮುಕ್ತಿಯನ್ನು ಹೊಂದಿದನು.

ಎರಡನೇ ಅಧ್ಯಾಯವು ಸಂಪೂರ್ಣವಾಯಿತು

ಸುಬ್ರಹ್ಮಣ್ಯಂ ಸುಬ್ರಹ್ಮಣ್ಯಂ ಷಣ್ಮುಖಾನಾಥಂ ಸುಬ್ರಹ್ಮಣ್ಯಂ |
ಸುಬ್ರಹ್ಮಣ್ಯಂ ಸುಬ್ರಹ್ಮಣ್ಯಂ ಶಂಕರಪುತ್ರಂ ಸುಬ್ರಹ್ಮಣ್ಯಂ ||

**********

## ಮೂರನೇ ಅಧ್ಯಾಯ
# ವೆಂಕಟ್ರಾಮನ್ ಕಥೆ

ಪೂರ್ವಕಾಲದಲ್ಲಿ ಕನ್ಯಾಕುಮಾರಿ ಸಮೀಪದಲ್ಲಿ ವಿಷ್ಣುಪುರಂ ಎಂಬ ಗ್ರಾಮದಲ್ಲಿ ವೆಂಕಟ್ರಾಮನ್ ಎಂಬ ಹಾಲು ಮಾರುವವನು ಇದ್ದನು. ಅವನು ದಿನಾಲು ತನ್ನ ಹತ್ತಿರವಿದ್ದ ಹತ್ತು ಎಮ್ಮೆಗಳ ಹಾಲು ಹಿಂಡಿ, ಅವೆಲ್ಲವನ್ನು ದೊಡ್ಡ ಪಾತ್ರೆಯಲ್ಲಿ ಹಾಕಿ, ಒಂದು ಗಾಡಿಯ ಮೇಲೆ ಇಟ್ಟುಕೊಂಡು ಊರಲ್ಲಿದ್ದವರಿಗೆ ಮಾರುತ್ತಿದ್ದನು. ವೆಂಕಟ್ರಾಮನ್ ಹಾಲಿಗೆ ಸ್ವಲ್ಪವೂ ನೀರು ಬೆರೆಸದೇ ಸ್ವಚ್ಛವಾದ ಹಾಲನ್ನು ಮಾರುತ್ತಾನೆಂದು ಎಲ್ಲರೂ ಹೇಳುತ್ತಿದ್ದರು. ವೆಂಕಟ್ರಾಮನ್ ಹೆಂಡತಿ ಸುಮತಿ. ದಂಪತಿಗಳಿಬ್ಬರೂ ಪ್ರತಿದಿನ ಪರಮೇಶ್ವರನನ್ನು ಪೂಜಿಸುತ್ತಿದ್ದರು. ವೆಂಕಟ್ರಾಮನ್.ಗೆ ಪರಮಶಿವನೆಂದರೆ ಬಹಳ ಪ್ರೀತಿ. ಪ್ರತಿ ಸೋಮವಾರ ಉಪವಾಸ ಇರುತ್ತಿದ್ದ.

ವೆಂಕಟ್ರಾಮನ್ ದಂಪತಿಗಳಿಗೆ ಎಲ್ಲಾ ಇದ್ದರೂ ಸಂತಾನಭಾಗ್ಯವಿಲ್ಲದೆ ಬಹಳ ನೋಯುತ್ತಿದ್ದರು. ಯಾವಾಗಲೂ ಪರಮೇಶ್ವರನಿಗೆ ಸತ್ಸಂತಾನ ಕೊಡೆಂದು ಪ್ರಾರ್ಥಿಸುತ್ತಿದ್ದರು. ಎಲ್ಲರ ಮನೆಗಳಲ್ಲಿ ಹಾಲು ಹಾಕಿದ ನಂತರ ಮನೆಗೆ ಬರುವ ದಾರಿಯಲ್ಲಿ ಒಂದು ಮರದ ಪಕ್ಕದಲ್ಲಿರುವ ನೀರಿನ ಕೊಳಾಯಿ ಕೆಳಗೆ ಆ ಪಾತ್ರೆಗಳನ್ನು ತೊಳೆಯುತ್ತಿದ್ದ. ಸ್ವಲ್ಪ ಉಳಿದ ಹಾಲನ್ನು ಪಕ್ಕದಲ್ಲೇ ಇರುವ ಮರದ ಬುಡಕ್ಕೆ ಹಾಕುತ್ತಿದ್ದ. ಹೀಗೆ ಪ್ರತಿದಿನ ಮಾಡುತ್ತಿದ್ದ.

ಒಂದು ದಿನ ರಾತ್ರಿ ವೆಂಕಟ್ರಾಮನ್.ನಿಗೆ ಕನಸ್ಸಿನಲ್ಲಿ ಶ್ರೀ ಸುಬ್ರಹ್ಮಣ್ಯೇಶ್ವರ ದರ್ಶನಕೊಟ್ಟನು. ಮಗು ವೆಂಕಟ್ರಾಮನ್! ನಿನ್ನ ಭಕ್ತಿಗೆ ಬಹಳ ಸಂತೋಷಪಟ್ಟೆನು. ಎಲ್ಲರಿಗೂ ಹಾಕಿ ಉಳಿದ ಹಾಲನ್ನು ನೀನು ಪ್ರತಿದಿನ ಮರದ ಬುಡಕ್ಕೆ ಹೊಯ್ಯುತ್ತಿದ್ದಿ ಅಲ್ವಾ? ಆ ಮರದ ಪಕ್ಕದಲ್ಲೇ ಇರುವ ಪೊದೆಯಲ್ಲಿ ಒಂದು ದಿವ್ಯ ಸರ್ಪವು ಇದೆ. ದಿನಾಲೂ ನೀನು ಹೊಯ್ಯುವ ಹಾಲನ್ನು ಆ ಸರ್ಪರಾಜನು ಸ್ವೀಕರಿಸುತ್ತಿದ್ದನು. ನೀನು ತಿಳಿಯದೇ ಮಾಡುತ್ತಿದ್ದುದರಿಂದ ಹಾಲು ಸ್ವಲ್ಪವೇ ಹೊಯ್ಯುತ್ತಿರುವುದರಿಂದ ಪ್ರತಿದಿನ ನೀನು ಮಾಡುವ ಈ ಒಳ್ಳೆಯ ಕೆಲಸದಿಂದ ನಿನಗೆ ತುಂಬಾ ಪುಣ್ಯ ಬಂದಿದೆ. ಅಷ್ಟೇ ಅಲ್ಲ, ನಿನ್ನೆ ನನಗೆಷ್ಟೋ ಪ್ರಿಯವಾದ ಶ್ರೀ ಸುಬ್ರಹ್ಮಣ್ಯ ಷಷ್ಠಿ. ನಿನ್ನೆ ಕೂಡಾ ಯಾವಾಗಲೂ ಮಾಡುವ ಹಾಗೆ ಅಲ್ಲಿ ಹಾಲು ಹೊಯ್ದಿದ್ದಿ. ಆ ವಿಧವಾಗಿ ಅಲ್ಲಿದ್ದ ದಿವ್ಯಸರ್ಪಕ್ಕೆ ಆ ಪವಿತ್ರದಿನ ಹಾಲು ಹೊಯ್ದಿದ್ದರಿಂದ ಬಹಳ ಪುಣ್ಯವನ್ನು ಸಂಪಾದಿಸಿದ್ದಿ. ಇದರಿಂದ ನಾನು ತುಂಬಾ ಸಂತೋಷಪಟ್ಟೆನು. ನಿನಗೆ ಶೀಘ್ರದಲ್ಲೇ ಒಳ್ಳೆಯ ಕುಮಾರನು ಹುಟ್ಟುತ್ತಾನೆ. ನೀನು ಆ ಕುಮಾರನನ್ನು ಕರೆದುಕೊಂಡು ಇಲ್ಲಿಗೆ ಸ್ವಲ್ಪ ದೂರದಲ್ಲಿರುವ ನನ್ನ ಪುಣ್ಯಕ್ಷೇತ್ರವಾದ ತಿರುಚಂದೂರುಗೆ ಹೋಗಿ ಮಗನಿಗೆ ಅಲ್ಲೇ ನಾಮಕರಣವನ್ನು ಮಾಡಬೇಕೆಂದು ಹೇಳಿ ಅಂತರ್ಧಾನವಾದನು.

ಮುಂಜಾನೆ ನಿದ್ರೆಯಿಂದ ಎದ್ದ ಕೂಡಲೇ ಹೆಂಡತಿ ಸುಮತಿಗೆ ತನಗೆ ಬಂದ ಕನಸ್ಸನ್ನು ವಿವರವಾಗಿ ಹೇಳಿದನು. ಆ ಷಣ್ಮುಖನು ತಮ್ಮನ್ನು ಅನುಗ್ರಹಿಸಿದಕ್ಕೆ ಅವರು ತುಂಬಾ ಸಂತೋಷಪಟ್ಟರು. ವೆಂಕಟ್ರಾಮನ್ ಆವತ್ತಿನಿಂದ ಪ್ರತಿದಿನ ಕ್ರಮ ತಪ್ಪದೇ ಆ ಮರದ ಬುಡಕ್ಕೆ ಹಾಲು ಹೊಯ್ಯುತ್ತಿದ್ದನು. ಯಾವಾಗಲಾದರೂ ಆ ದಿವ್ಯಸರ್ಪವು ಕಾಣಲು ಸಿಗಬಹುದು ಎಂದು ಕಾತರತೆಯಿಂದ ನೋಡುತ್ತಿದ್ದನು. ಆದರೇ ಯಾವತ್ತೂ ಕಾಣಲಿಲ್ಲ.

ಆ ಷಣ್ಮುಖನ ದಯೆಯಿಂದ ಸುಮತಿ ಕೆಲವು ದಿನಗಳಲ್ಲಿ ಗರ್ಭ ಧರಿಸಿ ಒಳ್ಳೆಯ ಗಂಡುಮಗುವನ್ನು ಹೆತ್ತಳು. ಶ್ರೀ ಸುಬ್ರಹ್ಮಣ್ಯೇಶ್ವರನು ಹೇಳಿದ ಹಾಗೆ ಆ ಗಂಡುಮಗುವನ್ನು ಕರೆದುಕೊಂಡು ತಿರುಚಂದೂರುಗೆ ಹೊರಟರು. ಆ ದಿನಗಳಲ್ಲಿ ಎತ್ತಿನಗಾಡಿ ಮೇಲೆಯೇ ಪ್ರಯಾಣ. ಸ್ವಲ್ಪದೂರ ಹೋಗುವಾಗ ದಾರಿಗೆ ಎದುರಾಗಿ ಒಂದು ಅದ್ಭುತ ತೇಜಸ್ಸಿನಿಂದ ಪ್ರಕಾಶಿಸುತ್ತಿರುವ ಸರ್ಪವು ಕಾಣಿಸಿತು. ದಾರಿ ಮಧ್ಯದಲ್ಲಿ ಹೆಡೆ ಬಿಚ್ಚಿ ಇದ್ದ ಆ ಸರ್ಪರಾಜನನ್ನು ನೋಡಿದ ಕೂಡಲೇ ಸ್ವಾಮಿಯು ಕನಸ್ಸಲ್ಲಿ ಹೇಳಿದ ಸರ್ಪವು ಇದೇ ಎಂದು ವೆಂಕಟ್ರಾಮನಿಗೆ ತಿಳಿಯಿತು. ಕುಟುಂಬವೆಲ್ಲಾ ಗಾಡಿಯಿಂದ ಕೆಳಗಿಳಿದು ಆ ದಿವ್ಯಸರ್ಪಕ್ಕೆ ನಮಸ್ಕರಿಸಿದರು. ಮಗುವಿನಿಂದ ಕೂಡಾ ನಮಸ್ಕರಿಸಿದರು. ಕೂಡಲೇ ಸರ್ಪವು ಮಾಯವಾಯಿತು.

ಪ್ರಯಾಣವನ್ನು ಮುಂದುವರಿಸುತ್ತಾ ವೆಂಕಟ್ರಾಮನ್ ದಂಪತಿಗಳು ಮರುದಿವಸ ಮುಂಜಾನೆ ತಿರುಚಂದೂರು ಸೇರಿ ಅಲ್ಲಿರುವ ಸ್ವಾಮಿಯನ್ನು ದರ್ಶಿಸಿದರು. ಮಗುವಿಗೆ ಅಲ್ಲೇ ಕಾರ್ತಿಕೇಯನ್ ಎಂದು ನಾಮಕರಣವನ್ನು ಮಾಡಿದರು. ಆ ರಾತ್ರಿ ಅಲ್ಲೇ ಇದ್ದು ಮರುದಿನ ತಿರುಗಿ ವಿಷ್ಣುಪುರಂ ಸೇರಿದರು. ವೆಂಕಟ್ರಾಮನ್ ಕುಟುಂಬವೆಲ್ಲಾ ಆ ಸ್ವಾಮಿಯನ್ನು ಸೇವಿಸುತ್ತಾ ಬದುಕ್ಕಿದ್ದಷ್ಟು ಕಾಲ ಸುಖವಾಗಿ ಜೀವಿಸಿದರು.

ಮೂರನೇ ಅಧ್ಯಾಯವು ಸಂಪೂರ್ಣವಾಯಿತು

ಸುಬ್ರಹ್ಮಣ್ಯಂ ಸುಬ್ರಹ್ಮಣ್ಯಂ ಷಣ್ಮುಖಾನಾಥಂ ಸುಬ್ರಹ್ಮಣ್ಯಂ |
ಸುಬ್ರಹ್ಮಣ್ಯಂ ಸುಬ್ರಹ್ಮಣ್ಯಂ ಶಂಕರಪುತ್ರಂ ಸುಬ್ರಹ್ಮಣ್ಯಂ ||

**********

## ನಾಲ್ಕನೇ ಅಧ್ಯಾಯ

# ವೆಂಕಟಶಾಸ್ತ್ರಿ ಕಥೆ

ಪೂರ್ವಕಾಲದಲ್ಲಿ ಮಧುರೈನಗರಕ್ಕೆ ಸ್ವಲ್ಪದೂರದಲ್ಲಿ ಒಂದು ಗ್ರಾಮದಲ್ಲಿ ವೆಂಕಟಶಾಸ್ತ್ರಿ ಎಂಬ ಮಹಾಪಂಡಿತನು ಇದ್ದನು. ಅವನು ಎಲ್ಲಾ ಶಾಸ್ತ್ರವಿದ್ಯೆಗಳಲ್ಲಿ ಬಹಳ ಪ್ರಾವಿಣ್ಯ ಇದ್ದವನೆಂದು ಪ್ರಸಿದ್ಧಿ ಹೊಂದಿದನು. ಸುತ್ತುಮುತ್ತಾ ಗ್ರಾಮಗಳಲ್ಲಿ ಯಾರಿಗೆ ಯಾವ ಸಲಹೆ ಬೇಕಾದರೂ ವೆಂಕಟಶಾಸ್ತ್ರಿ ಹತ್ತಿರವೇ ಬರುತ್ತಿದ್ದರು. ವಿವಾಹ, ಗೃಹಪ್ರವೇಶಗಳಿಗೆ ಮುಹೂರ್ತಗಳನ್ನೂ ನಿರ್ಣಯಿಸುವುದರಲ್ಲಿ ವೆಂಕಟಶಾಸ್ತ್ರಿಗೆ ಸಾಟಿ ಇಲ್ಲವೆಂದು ಜನರು ಹೇಳಿಕೊಳ್ಳುತ್ತಿದ್ದರು. ಆಲಯ ಪ್ರತಿಷ್ಠಾಪನ ಮುಹೂರ್ತಗಳು ಬೇಕೆಂದು ತುಂಬಾ ದೂರದ ಗ್ರಾಮಗಳಿಂದಲೂ ಕೂಡಾ ವೆಂಕಟಶಾಸ್ತ್ರಿ ಹತ್ತಿರವೇ ಬರುತ್ತಿದ್ದರು.

ವೆಂಕಟೇಶಾಸ್ತ್ರಿಗೆ ಐವತ್ತು ವರ್ಷದ ವಯಸ್ಸು ಬಂತು. ತುಂಬಾ ಆರೋಗ್ಯದಿಂದ, ಸುಖದಿಂದ ಇರುತ್ತಿದ್ದ ವೆಂಕಟಶಾಸ್ತ್ರಿಗೆ ಇದ್ದಕ್ಕಿದ್ದ ಹಾಗೆ ಒಂದು ಚರ್ಮವ್ಯಾಧಿ ಹಿಡಿಯಿತು. ಶರೀರವೆಲ್ಲಾ ತುರಿತದಿಂದ ಸ್ವಲ್ಪ ಕೆರೆದರೂ ಗಾಯವಾಗುತ್ತಿತ್ತು. ಚರ್ಮವು ಅಲ್ಲಲ್ಲಿ ಒಣಗಿದ ಹಾಗಿತ್ತು. ವೆಂಕಟಶಾಸ್ತ್ರಿಗೆ ಆಯುರ್ವೇದದ ಬಗ್ಗೆ ಪರಿಚಯ ಇದ್ದುದ್ದರಿಂದ ಕೆಲವು ಔಷಧಿಗಳನ್ನು ಮಾಡಿ ನೋಡಿದನು. ಅದರಿಂದ ಯಾವುದೇ ಗುಣ ಕಾಣಲಿಲ್ಲ. ಇನ್ನು ಲಾಭವಿಲ್ಲೆಂದು ಮಧುರೈನಿಂದ ದೊಡ್ಡವೈದ್ಯರಿಗೆ ಹೇಳಿಕಳಿಸಿದನು. ವೆಂಕಟಶಾಸ್ತ್ರಿಯ ಮೇಲೆ ಇದ್ದ ಅಭಿಮಾನದಿಂದ ಅವರು ಈ ಊರಿಗೆ ಬಂದು ಪರೀಕ್ಷಿಸಿ ಕೆಲವು ಮದ್ದುಗಳನ್ನು ಕೊಟ್ಟರು.

ಆದರೂ ಕೂಡ ಲಾಭವಿಲ್ಲದೇ ಹೋಯಿತು. ಇದೆಲ್ಲಾ ತನ್ನ ಪೂವಜನ್ಮದ ಕರ್ಮಫಲವೆಂದು ವೆಂಕಟಶಾಸ್ತ್ರಿ ಬಾಧೆಪಡುತ್ತಿದ್ದನು.

ಹೀಗೆ ಇರುವಾಗ ಒಂದುದಿನ ಆ ಊರಿಗೆ ಆಂಧ್ರಪ್ರದೇಶದಿಂದ ಒಬ್ಬ ಶ್ರೇಷ್ಠ ಜ್ಯೋತಿಷ್ಯನು ಬಂದನು. ಅವನು ಜ್ಯೋತಿಷ್ಯದಲ್ಲಿ ಬಹಳ ಪ್ರಾವೀಣ್ಯತೆಯನ್ನು ಪಡೆದವನೆಂದು ಯಾವ ಸಮಸ್ಯೆಗಾದರು ಪರಿಹಾರ ತಿಳಿಸುತ್ತಾನೆಂದು ಜನರು ಹೇಳಿಕೊಂಡರು. ಒಂದುದಿನ ಆ ಜ್ಯೋತಿಷ್ಯನು ವೆಂಕಟಶಾಸ್ತ್ರಿ ಮನೆಗೆ ಬಂದನು. ಅವನ ಜಾತಕ ನೋಡಿ ಕಣ್ಣುಗಳನ್ನು ಮುಚ್ಚಿಕೊಂಡು ಧ್ಯಾನಿಸಿ ಹೀಗೆ ಹೇಳಿದನು. ಸ್ವಾಮಿ, ನೀವು ಹಿಂದಿನ ಜನ್ಮದಲ್ಲಿ ಘೋರಾತಿಘೋರ ಕೆಲಸ ಮಾಡಿದ್ದೀರಿ. ಅಕಾರಣವಾಗಿ ಹತ್ತು ಸರ್ಪಗಳನ್ನು ಕೊಂದಿದ್ದೀರಿ. ನಿಮಗೆ ಯಾವುದೇ ಹಾನಿಯನ್ನು ಮಾಡದಿದ್ದರೂ ಅವುಗಳನ್ನು ಕ್ರೂರವಾಗಿ ಹಿಂಸಿಸಿ ಕೊಂದಿರಿ. ಆ ಪಾಪದ ಫಲವನ್ನು ಹೀಗೆ ಅನುಭವಿಸುತ್ತಿದ್ದೀರಿ. ಇದಕ್ಕೆ ಒಂದೇ ಉಪಾಯ. ಆ ಕಾರ್ತಿಕೇಯನನ್ನು ಬೇಡಿಕೊಳ್ಳುವುದು. ಇಲ್ಲಿಗೆ ಸ್ವಲ್ಪದೂರದಲ್ಲಿ ತಿರುಪ್ಪಾರಕುಂಡ್ರುಮ್ ಎಂಬ ಶ್ರೀ ಸುಬ್ರಹ್ಮಣ್ಯೇಶ್ವರ ದೇವರ ದಿವ್ಯಕ್ಷೇತ್ರವು ಇದೆ. ಅಲ್ಲಿ ಬೆಳಗಿದ ಷಣ್ಮುಖನು ಬಹಳ ಉನ್ನತ ಮಹಾತ್ಮೆ ಹೊಂದಿದವನು.  ಆ ಸ್ವಾಮಿಯು ತನ್ನ ಈಟಿಯಿಂದ ಅಲ್ಲಿ ಒಂದು ಸರೋವರವನ್ನು ಸೃಷ್ಟಿಸಿದ್ದಾನೆ. ನೀವು ಬರುವ ಮಂಗಳವಾರ ಆ ಕ್ಷೇತ್ರಕ್ಕೆ ಹೋಗಿ ಸ್ವಾಮಿಯನ್ನು ಆರಾಧಿಸಿ, ಆ ಸರೋವರದಲ್ಲಿ ಸ್ನಾನವನ್ನು ಮಾಡಿರಿ. ನಿಮ್ಮ ಪೂರ್ವಜನ್ಮದ ಪಾಪವು ನಶಿಸಿ ನಿಮಗೆ ಪೂರ್ತಿ ಆರೋಗ್ಯ ಉಂಟಾಗುತ್ತದೆ ಎಂದು ಹೇಳಿದನು.

ವೆಂಕಟಶಾಸ್ತ್ರಿ ಆ ನಂತರ ಬಂದ ಸೋಮವಾರವೇ ಹೊರಟು ರಾತ್ರಿಗೆ ತಿರುಪ್ಪಾರಕುಂಡ್ರುಮ್ ಸೇರಿದನು. ಬೆಳಿಗ್ಗೆ ಎದ್ದು, ಶುಚಿಯಾಗಿ ಸ್ನಾನಮಾಡಿ ದೇವಸ್ಥಾನದಲ್ಲಿ ದೇವರನ್ನು ದರ್ಶನ ಮಾಡಿದನು.  ಆನಂತರ ಪಕ್ಕದಲ್ಲೇ ಇರುವ ಸರೋವರದ ಹತ್ತಿರ ಬಂದು, ಆ ನೀರಲ್ಲಿ ಇಳಿದು ಎರಡು ಕೈಗಳಿಂದ ಆ ಕಾರ್ತಿಕೇಯನನ್ನು ನಮಸ್ಕರಿಸುತ್ತಾ ನೀರಲ್ಲಿ ಮೂರು ಸಲ ಮುಳಿಗಿದನು. ಅಷ್ಟೇ ಆಶ್ಚರ್ಯ! ವೆಂಕಟಶಾಸ್ತ್ರಿಯ ಚರ್ಮವ್ಯಾಧಿ ಕ್ಷಣದಲ್ಲಿ ಮಾಯವಾಯಿತು. ಆನಂದದಿಂದ ವೆಂಕಟಶಾಸ್ತ್ರಿ ಕಣ್ಣಲ್ಲಿ ನೀರು ಬಂತು. ದೇವಸ್ಥಾನದತ್ತಾ ತಿರುಗಿ ಆ ಸ್ವಾಮಿಯನ್ನು ಪ್ರಾರ್ಥಿಸುತ್ತಾ ಹೀಗೆ ಹೇಳಿದನು. ಸ್ವಾಮಿ ಕಾರ್ತಿಕೇಯ! ನೀನು ಜ್ಞಾನಸಂಪನ್ನನು. ನಿನ್ನನ್ನು ನಂಬಿದವರನ್ನು ನಿತ್ಯ ರಕ್ಷಿಸುವ ಅಮೃತಮೂರ್ತಿ. ಶ್ರೀವಲ್ಲಿ ದೇವಸೇನ ಸಮೇತ ಶ್ರೀ ಸುಬ್ರಹ್ಮಣ್ಯೇಶ್ವರ ನಿನಗಿದೋ ನನ್ನ ನಮಸ್ಕಾರಗಳು. ನಿನ್ನನ್ನು ಸ್ಮರಿಸುವವರಿಗೆ ಎಷ್ಟೋ ಜನ್ಮಗಳ ಪಾಪಗಳು ನಶಿಸಿ ಕೈವಲ್ಯ ಲಭಿಸುತ್ತದೆ. ನಿತ್ಯ ನಿನ್ನನ್ನು ಸ್ಮರಿಸುವವರಿಗೆ ಸರ್ವ ಸೌಭಾಗ್ಯಗಳೂ ಉಂಟಾಗುತ್ತದೆ ಎಂದು ಆ ಸ್ವಾಮಿಯನ್ನು ಎಷ್ಟೋ ವಿಧಗಳಿಂದ ಕೊಂಡಾಡಿದನು. ದೇವಸ್ಥಾನಕ್ಕೆ ಹೋಗಿ ದೇವರನ್ನು ದರ್ಶಿಸಿದನು. ತಿರುಗಿ ತನ್ನ ಊರಿಗೆ ಪ್ರಯಾಣ ಮಾಡಿದನು. ಜೀವಿಸಿದಷ್ಟು ಕಾಲ ಆ ಸ್ವಾಮಿಯನ್ನು ಸೇವಿಸುತ್ತಾ ಸುಖವಾಗಿ ಕಳೆದು ಕೊನೆಗೆ ಮುಕ್ತಿಯನ್ನು ಹೊಂದಿದನು.

ಆ ಸುಬ್ರಹ್ಮಣ್ಯೇಶ್ವರನನ್ನು ಅರ್ಚಿಸುವುದರಿಂದ ಕುಜದೋಷದಿಂದ ವಿಮುಕ್ತಿ ಪಡೆಯುತ್ತಾರೆ. ಯಾವುದೇ ರೀತಿಯ ಸರ್ಪದೋಷಗಳು ಇದ್ದರೂ ಬಿಟ್ಟುಹೋಗುತ್ತವೆ. ಬುದ್ಧಿ ವಿಕಸಿಸುತ್ತದೆ. ವಿದ್ಯಾರ್ಥಿಗಳಿಗೆ ಪರೀಕ್ಷೆಯಲ್ಲಿ ಜಯ ಉಂಟಾಗುತ್ತದೆ. ಮಂಗಳವಾರ ದಿನ ಷಣ್ಮುಖನನ್ನು

ಪೂಜಿಸಿದವರಿಗೆ ಒಳ್ಳೆಯ ಸಂತಾನವು ಉಂಟಾಗುತ್ತದೆ. ನಿತ್ಯವೂ ಆ ದೇವರನ್ನು ಸ್ಮರಿಸುವವರಿಗೆ ಸರ್ವಸೌಭಾಗ್ಯಗಳೂ ಉಂಟಾಗುತ್ತದೆ.

ನಾಲ್ಕನೇ ಅಧ್ಯಾಯವು ಸಂಪೂರ್ಣವಾಯಿತು
ಸುಬ್ರಹ್ಮಣ್ಯಂ ಸುಬ್ರಹ್ಮಣ್ಯಂ ಷಣ್ಮುಖಾನಾಥಂ ಸುಬ್ರಹ್ಮಣ್ಯಂ |
ಸುಬ್ರಹ್ಮಣ್ಯಂ ಸುಬ್ರಹ್ಮಣ್ಯಂ ಶಂಕರಪುತ್ರಂ ಸುಬ್ರಹ್ಮಣ್ಯಂ ||
******

ಐದನೇ ಅಧ್ಯಾಯ

## ಮಣಿಶರ್ಮನ ಕಥೆ

ಪೂರ್ವಕಾಲದಲ್ಲಿ ತಮಿಳುದೇಶದಲ್ಲಿ ಮಣಿಶರ್ಮ ಎಂಬ ಚಮ್ಮಾರ ಇದ್ದನು. ಅವನು ವಂಶ ಪರಂಪರೆಯಾಗಿ ಬಂದ ಚಪ್ಪಲಿ ಹೊಲಿಯುವ ವೃತಿಯಿಂದ ಜೀವನ ಮಾಡುತ್ತಾ ತುಂಬ ಭಕ್ತಿಪರಾಯಣನಾಗಿ ಇರುತ್ತಿದ್ದ. ಪರಮೇಶ್ವನೆಂದರೂ, ವಿಘ್ನೇಶ್ವರನೆಂದರೂ, ಸುಬ್ರಹ್ಮಣ್ಯೇಶ್ವರನೆಂದರೂ ಅವನಿಗೆ ತುಂಬಾ ಪ್ರಾಣ. ಪ್ರತ್ಯೇಕವಾಗಿ ಬಾಲಸುಬ್ರಹ್ಮಣ್ಯೇಶ್ವರನೆಂದರೆ ಇನ್ನೂ ಪ್ರಾಣ. ಯಾವಾಗಲೂ ಆ ಬಾಲಸುಬ್ರಹ್ಮಣ್ಯೇಶ್ವರನನ್ನೇ ನೆನೆಯುತ್ತಿದ್ದ. ಅವನ ಹೆಂಡತಿ ವಸುಮತಿ ಕೂಡಾ ಬಹಳ ಭಕ್ತಿಯಿದ್ದವಳು. ಆ ದಂಪತಿಗಳಿಬ್ಬರೂ ಬಹಳ ನಿರ್ಮಲ ಮನಸ್ಸಿನಿಂದ ಜೀವಿಸುತ್ತಿದ್ದರು.

ಮಣಿಶರ್ಮನಿಗೆ ಎಲ್ಲಾ ಇದ್ದರೂ ಸಂತಾನವಿಲ್ಲದೇ ಬಾಧೆಪಡುತ್ತಿದ್ದನು. ಪ್ರತಿದಿನ ಆ ದಂಪತಿಗಳು ತಮಗೆ ಸಂತಾನವನ್ನು ಅನುಗ್ರಹಿಸಬೇಕೆಂದು ಎಲ್ಲಾ ದೇವತೆಗಳನ್ನು ಪ್ರಾರ್ಥಿಸುತ್ತಿದ್ದರು. ಆದರೇ ಯಾವುದೇ ಫಲಿತ ದೊರೆಯಲಿಲ್ಲ. ದಿನಗಳು ಹೀಗೆ ಉರುಳುತ್ತಿರುವಾಗ, ಮಣಿಶರ್ಮನಿಗೆ ನಲವತ್ತನೇ ವಯಸ್ಸು ಬಂತು. ಒಂದುದಿನ ಈ ವಿಷಯವನ್ನೇ ಆಲೋಚಿಸುತ್ತಾ ತೀವ್ರವಾದ ಮನಸ್ತಾಪಕ್ಕೆ ಗುರಿಯಾದನು. ಹೆಂಡತಿಯೊಂದಿಗೆ ಹೀಗೆ ಹೇಳಿದನು. ನಾವು ಇಷ್ಟು ವರುಷದಿಂದ, ಇಷ್ಟು ದೇವತೆಗಳನ್ನು ಪ್ರಾರ್ಥಿಸುತ್ತಿದ್ದರೂ ಯಾವುದೇ ಫಲಿತ ಇಲ್ಲದೆ ಹೋಯಿತು. ನಾಳೆಯಿಂದ ನಾನು ವಾರದ ವರೆಗೆ ಒಂದು ಗುಟುಕು ನೀರನ್ನೂ ಕುಡಿಯದೆ ಉಪವಾಸ ದೀಕ್ಷೆಯನ್ನು ಮಾಡುತ್ತೇನೆ. ಆ ಸ್ವಾಮಿಯು ಕರುಣಿಸಿದರೆ ಸರಿ ಇಲ್ಲದಿದ್ದರೆ ಪ್ರಾಣವನ್ನಾದರೂ ಬಿಡುತ್ತೇನೆಂದು ಹೇಳಿದನು. ಆ ಮಾತನ್ನು ಕೇಳಿದ ಹೆಂಡತಿ ವಸುಮತಿ ಕಣ್ಣೀರಿಟ್ಟಳು. ಹೆಂಡತಿಗೆ ಹೇಳಿದ ಹಾಗೆ ಮಣಿಶರ್ಮನು ಮರುದಿನ ಬೆಳಗ್ಗಿನಿಂದ ಯಾವುದೇ ಆಹಾರವನ್ನು ತೆಗೆದುಕೊಳ್ಳುವುದನ್ನು ಬಿಟ್ಟುಬಿಟ್ಟನು. ಹಾಗೆ ಮೂರುದಿನಗಳಾಗುವಾಗ ನಿತ್ರಾಣನಾದನು. ನಾಲ್ಕನೇ ದಿನ ಮಂಚದ ಮೇಲಿಂದ ಏಳಲಾರದೇ ಹೋದನು. ಬಂಧುಗಳು, ಸ್ನೇಹಿತರು ಎಷ್ಟು ಹೇಳಿದರೂ ಕೇಳಲಿಲ್ಲ. ಐದನೇ ದಿನ ಸಾಯಂಕಾಲ ಒಬ್ಬ ಚಿಕ್ಕಹುಡುಗ ಎಲ್ಲಿಂದಲೋ ಓಡುತ್ತಾ ಬಂದು, ಮಾಮ ಈ ಬಾಳೆಹಣ್ಣನ್ನು ತಿನ್ನು, ನಿನಗೇನು ಆಗದು ಎಂದು ಅವನ ಕೈಯಲ್ಲಿ ಒಂದು ಬಾಳೆಹಣ್ಣನ್ನು ಇಟ್ಟನು. ಆ ಬಾಲಕನ ತೇಜಸ್ಸಿಗೆ ಆಶ್ಚರ್ಯಪಟ್ಟು ಮಣಿಶರ್ಮ ಒಂದು ಕ್ಷಣ ತನ್ನನ್ನೇ ಮರೆತನು. ತನ್ನನ್ನು ಯಾವುದೋ ತಿಳಿಯದ ಮಾಯೆ ಆವರಿಸಿದೆ. ತನ್ನ ಉಪವಾಸದ ಸಂಗತಿ ಕೂಡಾ ನೆನಪಿಗೆ ಬರಲಿಲ್ಲ. ಅಂದವಾಗಿ ಕಿರುನಗು ನಗುತ್ತಿರುವ ಆ ಬಾಲಕನನ್ನು ನೋಡುತ್ತಾ ಅವನಿಂದ ಬಾಳೆಹಣ್ಣನ್ನು ತೆಗೆದುಕೊಂಡು ಕಣ್ಣುಗಳಿಗೆ ಮುಟ್ಟಿಸಿ ತಿಂದನು. ಅಷ್ಟೇ!

ಶರೀರಕ್ಕೆಲ್ಲಾ ಯಾವುದೋ ದಿವ್ಯವಾದ ತೇಜಸ್ಸು ಪ್ರಸರಿಸಿದ ಹಾಗೆ ಆಯಿತು. ಆ ಬಾಲಕನು ಒಂದೇ ಕ್ಷಣದಲ್ಲಿ ಓಡುತ್ತಾ ಹೊರಗೆ ಹೋಗಿ ಮಾಯವಾದನು.

ಮಣಿಶರ್ಮನು ಕೂಡಲೇ ನಿದ್ರೆಗೆ ಜಾರಿದನು. ನಿದ್ರೆಯಲ್ಲಿ ಆ ಕುಮಾರಸ್ವಾಮಿ ಕನಸ್ಸಲ್ಲಿ ದರ್ಶನಕೊಟ್ಟು ಬಾಲಕನ ರೂಪದಲ್ಲಿ ಬಂದದ್ದು ತಾನೆ ಎಂದು ಬೇಗನೇ ಅವರಿಗೆ ಒಳ್ಳೆಯ ಗಂಡುಮಗು ಜನಿಸುತ್ತಾನೆಂದು ಹೇಳಿದನು. ಅಲ್ಲೇ ಸ್ವಲ್ಪದೂರದಲ್ಲಿ ಇರುವ ಪಳಮುದಿರ್ ಚೋಲೈ ಎನ್ನುವ ಪುಣ್ಯಕ್ಷೇತ್ರದಲ್ಲಿ ತಾನು ಬೆಳಗಿದ್ದೇನೆ, ಏಳು ಮಂಗಳವಾರಗಳು ತನ್ನನ್ನು ದರ್ಶನಮಾಡೆಂದು ಹೇಳಿದನು. ನಿದ್ರೆಯಿಂದ ಎಚ್ಚೆತ್ತ ಮಣಿಶರ್ಮ ತನಗೆ ಬಂದ ಕನಸ್ಸನ್ನು ವಿವರವಾಗಿ ಹೆಂಡತಿಗೆ ಹೇಳಿದನು. ಆ ದಂಪತಿಗಳ ಆನಂದಕ್ಕೆ ಕೊನೆಯಿಲ್ಲ. ಸಾಕ್ಷಾತ್ ಆ ಷಣ್ಮುಖನೇ ಬಂದು ದರ್ಶನಕೊಟ್ಟು ತಮನ್ನು ಕರುಣಿಸಿದ್ದಕ್ಕೆ ಬಹಳ ಸಂತೋಷಪಟ್ಟರು.

ಆ ದಂಪತಿಗಳಿಬ್ಬರೂ ಸ್ವಾಮಿ ತಿಳಿಸಿದ ಹಾಗೆ ಏಳು ಮಂಗಳವಾರಗಳು 'ಪಲಮುದಿರ್ ಚೋಲೈ'ನಲ್ಲಿ ಶ್ರೀವಲ್ಲೀ ದೇವಸೇನ ಸಮೇತ ಶ್ರೀ ಸುಬ್ರಹ್ಮಣ್ಯೇಶ್ವರ ಸ್ವಾಮಿಯನ್ನು ದರ್ಶಿಸಿದರು. ಆ ಸ್ವಾಮಿಯ ಅನುಗ್ರಹದಿಂದ ಅವರಿಗೆ ಅಂದದ ಗಂಡುಮಗು ಜನ್ಮಿಸಿದನು. ಮಣಿಶರ್ಮ, ವಸುಮತಿ ದಂಪತಿಗಳಿಬ್ಬರೂ ಬದುಕ್ಕಿದ್ದಷ್ಟು ಕಾಲ ಆ ಕಾರ್ತಿಕೇಯನನ್ನು ಸೇವಿಸುತ್ತಾ ಶಾಶ್ವತವಾಗಿ ಸುಖವಾಗಿ ಜೀವಿಸಿದರು.

ಐದನೇ ಅಧ್ಯಾಯವು ಸಂಪೂರ್ಣವಾಯಿತು
ಸುಬ್ರಹ್ಮಣ್ಯಂ ಸುಬ್ರಹ್ಮಣ್ಯಂ ಷಣ್ಮುಖಾನಾಥO ಸುಬ್ರಹ್ಮಣ್ಯಂ |
ಸುಬ್ರಹ್ಮಣ್ಯಂ ಸುಬ್ರಹ್ಮಣ್ಯಂ ಶಂಕರಪುತ್ರಂ ಸುಬ್ರಹ್ಮಣ್ಯಂ ||
**********

ಆರನೇ ಅಧ್ಯಾಯ

## ಪೆರಿಯಶೆಟ್ಟಿಯ ಕಥೆ

ಪೂರ್ವಕಾಲದಲ್ಲಿ ತಮಿಳುನಾಡಿನಲ್ಲಿರುವ ಕುಂಭಕೋಣಂ ಪಟ್ಟಣಕ್ಕೆ ಸ್ವಲ್ಪದೂರದಲ್ಲಿ ಒಂದು ಚಿಕ್ಕ ಗ್ರಾಮದಲ್ಲಿ ಪೆರಿಯಶೆಟ್ಟಿ ಎಂಬ ವ್ಯಾಪಾರಸ್ಥ ಇದ್ದನು. ಅವನು ಎಷ್ಟೋ ವ್ಯಾಪಾರಗಳನ್ನು ಮಾಡುತ್ತಾ ತುಂಬಾ ಸಂಪಾದನೆ ಮಾಡಿದನು. ಅಷ್ಟು ಸಂಪಾದನೆ ಮಾಡಿದರೂ ಪೆರಿಯಶೆಟ್ಟಿ, ಯಾವುದೇ ದಾನ-ಧರ್ಮಗಳನ್ನು ಮಾಡುತ್ತಿರಲಿಲ್ಲ. ಅವನಿಗೆ ಇಬ್ಬರು ಕುಮಾರಿಯರು ಇದ್ದರು : ವಂದನ ಮತ್ತು ಚಂದನ. ವಂದನಳಿಗೆ ವಿವಾಹವಾದರೂ, ಚಿಕ್ಕಮಗಳು ಚಂದನಳಿಗೆ ಎಷ್ಟು ಪ್ರಯತ್ನಿಸಿದರೂ ವಿವಾಹಭಾಗ್ಯ ಕೂಡಿಬರುತ್ತಿರಲಿಲ್ಲ. ಎಷ್ಟು ಸಂಬಂಧಗಳು ಬಂದರೂ ಕೊನೆಯ ಕ್ಷಣದಲ್ಲಿ ನಿಂತುಹೋಗುತ್ತಿದ್ದವು. ಹೀಗೆ ಯಾಕೆ ಆಗುತ್ತಿದೆಯೋ ಎಂದು ಆ ದಂಪತಿಗಳಿಗೆ ಅರ್ಥವಾಗುತ್ತಿರಲಿಲ್ಲ.

ಹೀಗಿರುವಾಗ, ಆ ವರ್ಷ ವಿಪರೀತವಾದ ಕ್ಷಾಮ ತಲೆದೋರಿತು. ಮಳೆ ಬರಲಿಲ್ಲ. ಜನರು ಯಾವ ವಸ್ತುಗಳನ್ನೂ ಕೊಳ್ಳುವ ಸ್ಥಿತಿಯಲ್ಲಿಲ್ಲದೇ ಪೆರಿಯಶೆಟ್ಟಿಗೆ ವ್ಯಾಪಾರದಲ್ಲಿ ಬಹಳ ನಷ್ಟ ಉಂಟಾಯಿತು. ನಷ್ಟದೊಟ್ಟಿಗೆ ಮಗಳ ವಿವಾಹವಾಗದಿರುವುದು ಕೂಡ ನೋವು ಉಂಟುಮಾಡಿತು. ಆಗಾಗ ಹೆಂಡತಿಯೊಟ್ಟಿಗೆ ಹತ್ತಿರದಲ್ಲೇ ಇರುವ ಸ್ವಾಮಿಮಲೈ

ದಿವ್ಯಕ್ಷೇತ್ರದಲ್ಲಿ ಪೂಜೆಗೊಳ್ಳುತ್ತಿರುವ ಶ್ರೀ ಸುಬ್ರಹ್ಮಣ್ಯೇಶ್ವರನನ್ನು ಪ್ರಾರ್ಥಿಸುತ್ತಿದ್ದರು. ಆದರೂ ಫಲವಿಲ್ಲದೇ ಹೋಯಿತು. ಎಷ್ಟು ಪ್ರಯತ್ನಿಸಿದರೂ ಚಿಕ್ಕಮಗಳಿಗೆ ವಿವಾಹ ಕೂಡಿಬರಲಿಲ್ಲ.

ಹೀಗಿರುವಾಗ, ಒಂದುದಿನ ಒಬ್ಬ ಸಾಧು ಅವರ ಮನೆಗೆ ಬಂದನು. ಅವನು ಪೆರಿಯಶೆಟ್ಟಿಗೆ ಬರುವ ಮಂಗಳವಾರದ ದಿನ ಸ್ವಾಮಿಮಲೈನಲ್ಲಿ ಬೆಳಗಿದ ಶ್ರೀ ಸುಬ್ರಹ್ಮಣ್ಯೇಶ್ವರನಿಗೆ ಅಭಿಷೇಕವನ್ನು ಮಾಡೆಂದು ಕೇಳಿದನು. ಆ ಮಾತನ್ನು ಕೇಳಿದ ಪೆರಿಯಶೆಟ್ಟಿಯು ಸ್ವಲ್ಪ ನಿರಾಕರಿಸುತ್ತಾ ಹೀಗೆ ಹೇಳಿದನು. ಸ್ವಾಮಿ ಬರುವ ವಾರ ಏನು? ಇದಕ್ಕೂ ಮೊದಲೇ ಎಷ್ಟೋ ಮಂಗಳವಾರಗಳು ಅಲ್ಲಿ ಅಭಿಷೇಕವನ್ನು ಮಾಡಿಸಿದ್ದೇನೆ. ಯಾವ ಫಲಿತವು ಇಲ್ಲದೇ ಹೋಯಿತು. ಇನ್ನೊಮ್ಮೆ ಮಾಡಿದರೂ ಏನಾಗುತ್ತದೆ ಎಂದು ಹೇಳಿದನು. ಆಗ ಆ ಸಾಧುವು : ತಮ್ಮಾ, ಆಗಬಹುದು. ಇಷ್ಟುಸಾರಿ ಮಾಡಿಸಿದ್ದೀ ಒಂದುಸಾರಿ ಇನ್ನೊಮ್ಮೆ ಮಾಡಿಸು ಖಂಡಿತಾ ಫಲ ಸಿಗುತ್ತದೆ ಎಂದು ಹೇಳಿದನು. ಆಗ ಪೆರಿಯಶೆಟ್ಟಿಯು ಆ ಸಾಧುವಿಗೆ ಅದೇನಷ್ಟು ಕಷ್ಟವಲ್ಲ ಬಿಡಿ, ಮತ್ತೊಮ್ಮೆ ಅಭಿಷೇಕವನ್ನು ಮಾಡಿಸುತ್ತೇನೆ ಎಂದನು.

ಶನಿವಾರ, ಆದಿತ್ಯವಾರ ಹೋಗಿ ಸೋಮವಾರ ಬಂತು. ಪೆರಿಯಶೆಟ್ಟಿಗೆ ಯಾವುದೋ ಮುಖ್ಯವಾದ ಕೆಲಸ ಉಂಟೆಂದು ಪಕ್ಕದ ಊರಿನ ಜಮೀನುದಾರನಿಂದ ಕರೆ ಬಂದದ್ದರಿಂದ ಹೋದನು. ಎಲ್ಲಾ ವಿವರವಾಗಿ ಮಾತಾಡುತ್ತಿರುವಾಗ ಸಾಯಂಕಾಲವಾಯಿತು. ಒಂದೇರೀತಿ ಮಳೆ ಸುರಿಯತೊಡಗಿತು. ಅಂತಹ ಮಳೆಯಲ್ಲಿ ಹೊರಡಲು ಸಾಧ್ಯವಾಗದೇ ರಾತ್ರಿ ಅಲ್ಲೇ ಇರಬೇಕಾಯಿತು. ಮರುದಿನ ಮಧ್ಯಾಹ್ನದವರೆಗೆ ಮಳೆ ಬಿಡಲಿಲ್ಲ. ಅಲ್ಲಿಗೆ ಆ ಸಾಧುವು ಹೇಳಿದಹಾಗೆ ಈ ಮಂಗಳವಾರ ಸ್ವಾಮಿಮಲೈಗೆ ಹೋಗಲು ಪೆರಿಯಶೆಟ್ಟಿಗೆ ಆಗಲಿಲ್ಲ. ಬರುವ ವಾರ ಹೋಗಬಹುದೆಂದು ಕೊಂಡನು.

ಆ ವಾರ ಕಳೆದು, ತಿರುಗಿ ಸೋಮವಾರ ಬಂತು. ಹೆಂಡತಿ ಈ ಸಾರಿ ಹೇಗಾದರೂ ಸ್ವಾಮಿಮಲೈಗೆ ಹೋಗಿ ಅಭಿಷೇಕವನ್ನು ಮಾಡಿಸಬೇಕು ಎಂದಳು. ಬೆಳಿಗ್ಗೆ ಇನ್ನು ಸ್ವಲ್ಪ ಹೊತ್ತಿನಲ್ಲೇ ಹೊರಡುತ್ತಾರೆ ಅನ್ನುವಾಗ ಪೆರಿಯಶೆಟ್ಟಿ ಒಂದೇಸಾರಿ ಕಾಲುಜಾರಿ ಬಿದ್ದನು. ಅವನಿಗೆ ಸ್ವಲ್ಪವೂ ಕದಲಲಿಕ್ಕೆ ಆಗಲಿಲ್ಲ.   ಆದ್ದರಿಂದ ಆ ಶ್ರೀ ಸುಬ್ರಹ್ಮಣ್ಯೇಶ್ವರನ ದರ್ಶನಕ್ಕೆ ಆ ಮಂಗಳವಾರ ಕೂಡಾ ಹೋಗಲಾಗಲಿಲ್ಲ. ಯಾಕೆ ಪ್ರತಿಸಾರಿ ಈ ವಿಧವಾಗಿ ಅವಾಂತರಗಳು ಬರುತ್ತಿವೆಂದು ಹೆಂಡತಿ ತುಂಬಾ ಬಾಧೆಪಟ್ಟಳು.

ಇಷ್ಟರಲ್ಲಿ ಈ ವಾರವೂ ಹೋಯಿತು. ಮತ್ತೆ ಸೋಮವಾರ ಬಂತು. ಇನ್ನು ಸ್ವಲ್ಪಸಮಯದಲ್ಲಿ ಹೊರಡೋಣವೆಂದು ಎಣಿಸುತ್ತಿರುವಾಗ ಹೆಂಡತಿಯ ಕಾಲು ಉಳುಕಿತು. ಆ ನೋವು ಕ್ಷಣ ಕ್ಷಣಕ್ಕೆ ಜಾಸ್ತಿಯಾಗಿ ಸ್ವಲ್ಪವೂ ಕದಲಲಾಗಲಿಲ್ಲ. ಇನ್ನು ಈ ವಾರ ಕೂಡಾ ಹೋಗಲಾಗಲಿಲ್ಲ. ಯಾಕೆ ಹೀಗೆ ಆಗುತ್ತಿದೆಯೋ ಎಂದು ಅವರಿಗೆ ಅರ್ಥವಾಗಲಿಲ್ಲ. ತಾವು ಯಾವುದೋ ಅಪರಾಧ ಮಾಡಿದೆವು ಎಂದುಕೊಂಡನು. ಆ ದಿನ ರಾತ್ರಿ ಶ್ರೀ ಸುಬ್ರಹ್ಮಣ್ಯೇಶ್ವರನು ಪೆರಿಯಶೆಟ್ಟಿ ಹೆಂಡತಿಯ ಕನಸ್ಸಲ್ಲಿ ಕಾಣಿಸಿಕೊಂಡು ಹೀಗೆ ಹೇಳಿದನು. ತಾಯಿ, ನಿನ್ನ ಗಂಡನು ನನ್ನ ದರ್ಶನವನ್ನು ಪಡೆಯುವುದು ತುಂಬಾ ಸುಲಭ, ಅದೇನಂತಹ ಕಷ್ಟವಲ್ಲದ್ದು ಎಂದು ಅಹಂಕಾರದಿಂದ ಹೇಳಿದ್ದಾನೆ. ಪ್ರತಿ ಮಂಗಳವಾರ ಹೋಗುತ್ತಿದ್ದೇವೆ ಅಲ್ವಾ, ಮತ್ತೊಂದುಸಾರಿ ಹೋಗುವುದು ಅದೇನಂತಹ ಕಷ್ಟವಲ್ಲವೆಂದು ಹೇಳಿದ್ದಾನೆ. ನನ್ನ

ಅನುಗ್ರಹವಿಲ್ಲದೆ ಎಷ್ಟು ಹತ್ತಿರದಲ್ಲಿದ್ದರೂ ನನ್ನ ದರ್ಶನವು ಹೇಗೆ ಜರುಗುವುದಿಲ್ಲವೋ ತಿಳಿಸಲು ಹೀಗೆ ಮಾಡುತ್ತಿದ್ದೇನೆ. ಈ ಬಾರಿ ಖಂಡಿತಾ ನನ್ನ ದರ್ಶನವು ಲಭಿಸುತ್ತದೆ ಎಂದು ಹೇಳಿದನು.

ಹೆಂಡತಿ ನಿದ್ರೆಯಿಂದ ಎದ್ದಕೂಡಲೇ ತನಗೆ ಬಂದ ಸ್ವಪ್ನದ ಬಗ್ಗೆ ಪೆರಿಯಶೆಟ್ಟಿಗೆ ವಿವರವಾಗಿ ಹೇಳಿದಳು. ಪೆರಿಯಶೆಟ್ಟಿ ತನ್ನ ಅಹಂಕಾರವನ್ನು ಮನ್ನಿಸೆಂದು ಆ ಸ್ವಾಮಿಗೆ ನಮಸ್ಕರಿಸಿ ಕೆನ್ನೆಗೆ ಹೊಡೆದುಕೊಂಡನು. ಇನ್ನು ಯಾವತ್ತೂ ಹಾಗೆ ಮಾತಾಡುವುದಿಲ್ಲ, ತನ್ನನ್ನು ಕ್ಷಮಿಸೆಂದು ಬೇಡಿಕೊಂಡನು. ಭಕ್ತವತ್ಸಲನಾದ ಆ ಸ್ವಾಮಿಯ ಅನುಗ್ರಹದಿಂದ ಆ ಮುಂದಿನ ಮಂಗಳವಾರ ಆ ಕುಟುಂಬಕ್ಕೆ ಸ್ವಾಮಿಮಲೈನಲ್ಲಿ ದೇವರ ಒಳ್ಳೆಯ ದರ್ಶನವು ಸಿಕ್ಕಿತು. ಅವರು ಆ ಶ್ರೀ ಸುಬ್ರಹ್ಮಣ್ಯೇಶ್ವರ ಸ್ವಾಮಿಗೆ ಬಹಳ ವೈಭವದಿಂದ ಅಭಿಷೇಕವನ್ನು ಮಾಡಿಸಿದರು. ಇದು ಜರುಗಿದ ಸ್ವಲ್ಪದಿನಗಳಲ್ಲೇ ನಾಗರಾಜು ಎಂಬ ವರನೊಟ್ಟಿಗೆ ಚಂದನಳ ವಿವಾಹವು ವಿಜೃಂಭಣೆಯಿಂದ ಜರುಗಿತು. ಪೆರಿಯಶೆಟ್ಟಿ ಕುಟುಂಬವೆಲ್ಲಾ ಆ ಸ್ವಾಮಿಯನ್ನು ಸೇವಿಸುತ್ತಾ ಬದುಕಿದ್ದಷ್ಟು ಕಾಲ ಸುಖವಾಗಿ ಜೀವಿಸಿದರು.

ಆರನೇ ಅಧ್ಯಾಯವು ಸಂಪೂರ್ಣವಾಯಿತು
ಸುಬ್ರಹ್ಮಣ್ಯಂ ಸುಬ್ರಹ್ಮಣ್ಯಂ ಷಣ್ಮುಖಾನಾಥಂ ಸುಬ್ರಹ್ಮಣ್ಯಂ |
ಸುಬ್ರಹ್ಮಣ್ಯಂ ಸುಬ್ರಹ್ಮಣ್ಯಂ ಶಂಕರಪುತ್ರಂ ಸುಬ್ರಹ್ಮಣ್ಯಂ ||
ಶ್ರೀ ಸುಬ್ರಹ್ಮಣ್ಯ ವ್ರತಂ ಸಮಾಪ್ತಂ
******



ಸ್ಕಂದಂ ಷಣ್ಮುಖಂ ದೇವಂ ಶಿವತೇಜಂ ದ್ವಿಷಡ್ಭುಜಂ |

ಕುಮಾರಂ ಸ್ವಾಮಿನಾಥಮ್ ತ್ವಮ್ ಕಾರ್ತಿಕೇಯಮ್ ನಮಾಮ್ಯಹಂ ||



ಸುಬ್ರಹ್ಮಣ್ಯ ಸುಬ್ರಹ್ಮಣ್ಯ ಸುಬ್ರಹ್ಮಣ್ಯ ಪಾಹಿಮಾಂ |

ಸುಬ್ರಹ್ಮಣ್ಯ ಸುಬ್ರಹ್ಮಣ್ಯ ಸುಬ್ರಹ್ಮಣ್ಯ ರಕ್ಷಮಾಂ ||